
ತಲಿಶೂಲೆ ಅರಿತಲಿಶೂಲಿ ನಿವಾರಣ ಯಂತ್ರ

ಂ	ನ	ಮ	ಶ್ರಿ	ವ
ಮ	ಮ	ಶಿ	ವ	ಯ
ಮ	ಶಿ	ವ	ಮ	ಓಂ
ಶಿ	ವ	ಯ	ಹ್ರೀಂ	ಹ್ರೀಂ

ಈ ಯಂತ್ರವನ್ನು ತಾಮ್ರದ ತಗಡಿನಲ್ಲಿ ಬರೆದು ಭುಜಪತ್ರಿ ನವಸಾರ ಹಾಕಿ ಪೂಜಿಸಿ ತಾಯಿತದಲ್ಲಿ ಹಾಕಿಕೊಂಡು ತಲೆಗೆ ಕಟ್ಟಿಕೊಳ್ಳಬೇಕು. ಯಾವ ತಲೆ ಶೂಲೆಯಾದರೂ ಹೋಗುವದು.

ಸಣ್ಣ ಮಕ್ಕಳ ಸರ್ವ ಜ್ವರ ನಿವಾರಣೆಯ ಯಂತ್ರ



ಶ್ರೀಂ ಹ್ರೀಂ

ತಾಮ್ರದ ತಗಡಿನಲ್ಲಿ ಬರೆದು ಬ್ರಾಕೆಟ್ಟಿನಲ್ಲಿ ಹೆಸರು ಬರೆದು ಪೂಜಾದಿಗಳನ್ನು ಮಾಡಿ ಕಟ್ಟಬೇಕು.

ಮತ್ತೊಂದು ವಿಧ ಸಣ್ಣ ಮಕ್ಕಳ ಜ್ವರಕ್ಕೆ ಕಟ್ಟುವ ಯಂತ್ರ.

೩	೧೦	೨	೭
೬	೩	೭	೬
೯	೪	೮	೧
೪	೫	೫	೮

ಹಿಂಭಾಗದಲ್ಲಿ ಹೆಸರನ್ನು ಬರೆಯುವದು.

ಈ ಯಂತ್ರವನ್ನು ಪಂಚಲೋಹದ ತಗಡಿನಲ್ಲಿ ಬರೆದು ಸ್ವಲ್ಪ ಗೋರೋಜನ ಕಸ್ತೂರಿ ಹಾಕಿ ಅಷ್ಟವಿಧಾರ್ಚನೆಯಿಂದ ಪೂಜಿಸಿ ಬೆಳ್ಳಿ ತಾಯಿತದಲ್ಲಿ ಹಾಕಿ ಕಟ್ಟಲು ಮಕ್ಕಳಿಗೆ ಯಾವ ವಿಧವಾದ ಜ್ವರಗಳಾಗಲಿ ನಿವಾರಣೆಯಾಗುತ್ತದೆ.


ಬಲದಿಂದಲೇ ಪ್ರತ್ಯಕ್ಷವಾಗಿ ತೋರಿಸುತ್ತಿದ್ದರು. ಈಗಿನ ಕಾಲದ ಜನರು ಅಂಥ ಕ್ರಿಯಾಸಿದ್ಧಿಯೂ ಮಂತ್ರಸಿದ್ಧಿಯೂ ಇಲ್ಲದೆ ಇರುವದರಿಂದಲೂ ಕಲಿಯುಗದ ಪ್ರಮಾಣವು ಐದು ಸಾವಿರ ವರ್ಷ ತುಂಬಿದನಂತರ ಯಂತ್ರ-ಮಂತ್ರ-ತಂತ್ರಾದಿ ಗಳು ಕಲಿಮಹಿಮೆಯಿಂದ ಸಿದ್ಧಿಸಲಾರವೆಂದು ಈ ಕೆಳಗೆ ಉದಹರಿಸಿರುವ ಶಾಸ್ತ್ರ ಪ್ರಮಾಣದಿಂದಲೇ ವ್ಯಕ್ತವಾಗುತ್ತದೆ.

ಕಲಿಯುಗ ಸ್ವರೂಪವು.

ಕಲೌಪಾಪಿನಿ ಸಂಪ್ರಾಪ್ತೇ ಧರ್ಮಹ್ರಾಸೋಭವಿಷ್ಯತಿ ।
ಶ್ಲೋ॥ ಕಲೌಪಾಪಿನಿ ಸಂಪ್ರಾಪ್ತೇ ಪಂಚಕೇ ಪಾಪಿನೋಜನಾಃ ॥
ಯಾತೇತ್ವಬ್ದ ಸಹಸ್ರಾಣಾಂ ಪಂಚಕೇ ಪಾಪಿನೋಜನಾಃ ॥
ಚಂಡಾಲಾಃ ಪ್ರಚುರಂಯಾಂತಿಯಾಂತಿ ಬ್ರಹ್ಮದ್ವಿಷೋಬಲಂ ॥
ಬುದ್ಧಿಭ್ರಂಶೋದ್ವಿಜಾತಿನಾಂ ವಿದ್ಯಕರ್ಮಾದಿಸಂಕ್ಷಯಃ ॥
ಶಾಸ್ತ್ರಸ್ಯಾಪಾರ್ಥವಾದಶ್ಚ ಶಿಷ್ಟಾಚಾರವಿನಾಶನಂ ।
ದುರ್ಭಿಕ್ಷಮಪ್ಯನಾವೃಷ್ಟಿರ್ಬಹುಳೋತ್ಪಾತದರ್ಶನಂ ॥
ಸೂರ್ಯಾದಿಗ್ರಹಗೋಳಾನಾಂ ಗತಿವೈಷಮ್ಯಸಂಭವಃ ।
ಗಂಗಾಮಹಾತ್ಮ್ಯಹಾನಿಶ್ಚ ಶೂದ್ರೋಪನಯನಾಧಿಕಂ ॥
ಕುಂಡಗೋಳಕಸಂತಾನಂ ಮದ್ಯಮಾಂಸಪರಿಗ್ರಹಃ ।
ಶಿವಕೇಶವನಿಂದಾಚ ಶ್ರಾದ್ಧಾದೀನಾಂ ವಿಪರ್ಯಯಃ ॥
ಆಚಾರ್ಯಗುರುಧಿಕ್ಕಾರಪುರೋಹಿತ ವಿಸರ್ಜನಂ ।
ಅನರ್ಥೋಮಂತ್ರತಂತ್ರಾಣಾಂ ಮತವಾದದುರಾಗ್ರಹಃ ।
ಸ್ವಂಧರ್ಮಂಪರಿತ್ಯಜ್ಯಪರಭೃತ್ಯೋಪಜೀವಿನಾಂ ।
ನಶೃಣಂತಿಪಿತುರ್ವಾಕ್ಯಂ ಪುತ್ರಾಶ್ಚಭ್ರಾತರಸ್ತಥಾ ॥
ಪರನಿಂದಾಪರಸ್ವತ್ವಂ ಪರದಾರಪರಿಗ್ರಹಃ ।
ಸ್ತ್ರೀಣಾಂಪುನರ್ವಿವಾಹಶ್ಚಶೂದ್ರ ಸಂನ್ಯಾಸಲಕ್ಷಣಂ ॥
ದೇವತಾಮಹಿಮಾಲೋಪೋ ವೇದಾಧ್ಯಯನವರ್ಜನಂ ॥
ನಭೃತ್ಯಾನಿಕಳತ್ರಾಣಿ ಭವಿಷ್ಯಂತಿ ಕಥೋತ್ತರೆ ॥

ಈ ಪ್ರಕಾರವಾಗಿ ಶಾಸ್ತ್ರಪ್ರಮಾಣವಿರುವದು.

ಮತ್ತೊಂದು ವಿಧ ಜ್ವರದ ಯಂತ್ರ.



ಈ ಯಂತ್ರವನ್ನು ಭುಜಪತ್ರೆಯಲ್ಲಿ ಕುಂಕುಮದಿಂದ ಬರೆದು ಮಧ್ಯೇ ಬ್ರಾಕೆಟಿನಲ್ಲಿ ಹೆಸರನ್ನು ಬರೆದು ಮಂತ್ರಿಸಿ ಕಟ್ಟಬೇಕು.

೩ ನೆಯ ದಿವಸ ಬರುವ ಜ್ವರಕ್ಕೆ ಇನ್ನೊಂದು ವಿಧ ಯಂತ್ರ.



ಕಸದ ಮಂತ್ರ.

" ಸುತನ ರಾಯನ ಮಗಳು ಸುತನ ದೇವಿ ಹರಿದ ನರಹುಳುವಳು ಮುಂಡ
ಎಲುವು ಹೊಂದಿಸುವಳು ಸ್ವರ್ಗಕ್ಕೆ ಹೋಗಿ ನೆತ್ತರ ಬುತ್ತಿಯನ್ನು ತಂದು ಕೇತರಿ
ಬಾತರಿ ನಿನಗೆ ವೈದ್ಯನ ಕೊಟ್ಟ ಸಿದ್ಧರ ಪಾದದಾಣೆ ಓಂ ಜಂಬಾಳು ಗುರುಪ್ರಸಾದ"
ಎಂದು ೩ ಸಾರಿ ಮಂತ್ರಿಸಿದರೆ ಕಸ ಬಾವು ನಿವಾರಣೆ, ಕೈಕಾಲು ಆರತಲೆನೋವು
ನಿವಾರಣೆ ಆಗುವದು.

ಬಾಯಿ ಕಟ್ಟುವ ಮಂತ್ರ.

" ಮುನಿಮುನಿ ವಿಷ್ಣುಮುನಿ ಜ್ಯೇಷ್ಠಮುನಿ ನಸುನಲಿಯುವಗು
ಮುನಿವ ಮುನ್ನೂರು ಮನುಷ್ಯರ ಬಾಯಂ ಕಟ್ಟುವೆ ಇನ್ನು ನುಡಿದ ಹೆಗ್ಗಡಿಯು
ಬಾಯಂ ಕಟ್ಟಿದೆ ಕೇಡ ನುಡಿದ ಮಂತ್ರಿಯ ಬಾಯಂ ಕಟ್ಟಿದೆ ಎಡಬಲದಲ್ಲಿ ೩೩
ಸಿದ್ಧ ಪ್ರಧಾನರು ಮುಚ್ಚಿದ್ದ ಬಾಯಂ ತೆಗೆದರೆ ೨೭ ಕೋಟಿ ಸಿದ್ಧರಾಣೆ ೩೪
ಕೋಟಿ ಮಹಾದೇವರ್ಕಳಾಣೆ ಹರಿಹರಬ್ರಹ್ಮಾದಿಗಳಾಣೆ ಅಷ್ಟದಿಕ್ಪಾಲಕರಾಣೆ
ಸಿದ್ಧಕೋಟಿ ಸಿದ್ಧಯಂತ್ರ ಸಿದ್ಧಮಂತ್ರವೆನಗೆ ಸಿದ್ಧಿ ಆಗಲಿ ಓಂ ಗುರುಪ್ರಸಾದ"
ಮಂತ್ರದಿಂದ ೧೦ ಹರಳನ್ನು ಮಂತ್ರಿಸಿ ಯಾರ ಮನೆಗೆ ಹೋಗಲಿ ೮ ದಿಕ್ಕಿಗೆ
೮ ಹರಳನ್ನು ಎಸೆದು ೨ ಹರಳನ್ನು ಪಂಚೆ ಸೆರಗಿನಲ್ಲಿ ಕಟ್ಟಿಕೊಂಡು ಹೋದರೆ
ಯಾರ ಸಂಗಡ ಮಾತನಾಡಿದರೂ ತನ್ನ ಮಾತಿನಂತೆ ಒಪ್ಪಿಕೊಂಡು ಎದುರು
ಮಾತುಗಳನ್ನಾಡುವದಿಲ್ಲ. ಹಿಂದೆ ಹೇಳಿದ ಪ್ರಕಾರ ಮಂತ್ರಸಿದ್ಧಿ.

ಮಾಟಾ ಮರವಿ ಇಳುವಿನ ಮಂತ್ರ.

" ಮುಚ್ಚುಕೊನಿ ಸಂಧಿನುನ್ನ ಬೊಮ್ಮ ಮೂಲಗೊಂಡಿನುನ್ನ ಬೊಮ್ಮ ದಿಗು
ಬು ದೇವಿ ದೇವರ ಕಾ-ಮಂತ್ರಸಿದ್ಧನರಿ ಓಂ ಜಂಬಾಲಗುರು ಪ್ರಸಾದವು"
ಈ ಮಂತ್ರದಿಂದ ನೀರು ಮಂತ್ರಿಸಿ ತಲೆಯಿಂದ ಇಳಿಯ ಹೊಯಿದರೆ ಮಾಟಾ
ಮರವಿ ಇಳಿಯುವದು. ಹಿಂದೆ ಹೇಳಿದ ಪ್ರಕಾರ ಈ ಮಂತ್ರವನ್ನು ಸಿದ್ಧ ಮಾಡಿ
ಕೊಳ್ಳುವದು.

ತಗಣಿ ಮಂತ್ರ.

ಓಂ॥ ನಮೋ ಭಗವತೇ ಚಂಡುಮಾರಿ ಚಿಟುಚಿಟು ಓಂ ಚಾಂಡಾಲೀ
ಸ್ವಾಹಾ ಒಲಿಗೆ ಬೂದಿಯನ್ನು ಈ ಮಂತ್ರದಿಂದ ೧೦೮ ಸಾರಿ ಮಂತ್ರಿಸಿ ಮನೆ
ಬಳ್ಳಿ ಚೆಲ್ಲಲು ತಗಣಿ ಹೋಗುವವು.

ಛಳಿಜ್ವರದ ಮಂತ್ರ.

ಓಂ॥ ನಮೋ ಶ್ರೀನೀಲಕಂಠರಾಯ ಸ್ವಾಹಾ ಕಾಮಾಕ್ಷಿರಮಲಂಕಲಕ್ಷ್ಮಂಕಹಂ
ಹ್ರೀಂ ವಿನಾಶಯ ವಿನಾಶಯ ಅಯದಾಕಿನಿ ದಾಕಿನಿ ಬ್ರಹ್ಮಾಂಡ ರಾಕ್ಷಸ

ತ್ತರಾಭಿಮುಖವಾಗಿ ತೆಗೆಯಬೇಕು ಮತ್ತು ಸರ್ಪದಂಶದ ಸ್ಥಳದಲ್ಲಿ ಆಬೇರನ್ನು ತೆಯಿದು ಲೇಪಿಸಬೇಕು ವಿಷವಿಳಿಯುವದು (೯) ಆಶ್ಲೇಷಾ ನಕ್ಷತ್ರದಲ್ಲಿ ಚಂದನದ ಬೇರನ್ನು ಪೂರ್ವಾಭಿಮುಖವಾಗಿ ತೆಗೆಯಬೇಕು ಅದನ್ನು ರೇಶಿಮೆಯಿಂದ ಕಟ್ಟಿ ಕೈಯೊಳಗೆ ಕಟ್ಟಿಕೊಳ್ಳಲು ರಾತ್ರ್ಯಂಧತ್ವವು ದೂರಾಗುತ್ತದೆ. (೧೦] ಮಘಾನಕ್ಷತ್ರದಲ್ಲಿ ಮಾಂದಾರವೃಕ್ಷದ ಬೇರನ್ನು ಪೂರ್ವಾಭಿಮುಖವಾಗಿ ನಿಂತುಕೊಂಡು ತೆಗೆದು ಕೈಯಲ್ಲಿ ಕಟ್ಟಲು ಜ್ವರವು ನಿಲ್ಲುವದು [೧೧] ಪೂರ್ವಾ ನಕ್ಷತ್ರದಲ್ಲಿ ಆಗ್ನೇಯ ಮುಖವಾಗಿ ಬಿಳೇ ಚಂಬರ್ಪೆ ಬೇರನ್ನು ತಂದು ಹತ್ತರ ಇಟ್ಟುಕೊಳ್ಳಲು ಇಚ್ಛಿತ ಕಾರ್ಯವು ಸಫಲವಾಗುವದು [೧೨) ಉತ್ತರಾನಕ್ಷತ್ರದಲ್ಲಿ ತುಲಸಿಯ ಬೇರನ್ನು ಪೂರ್ವಾಭಿಮುಖವಾಗಿ ತಂದು ಧೂಪವನ್ನು ಹಾಕಿ ಕರೇದಾರದಿಂದ ಎಡಗೈಯಲ್ಲಿ ಕಟ್ಟಬೇಕು ಇಲ್ಲವೆ ತೆಯಿದು ಹೊಟ್ಟೆಯಲ್ಲಿ ಕೊಡಬೇಕು ಅಂದರೆ ಜ್ವರವು ಇಲ್ಲದಂತಾಗುವದು (೧೩] ಹಸ್ತನಕ್ಷತ್ರದಲ್ಲಿ ಪೂರ್ವಾಭಿಮುಖವಾಗಿ ನೆಲಗುಳ್ಳದ ಬೇರನ್ನು ತಂದು ದಾರದಲ್ಲಿ ತೊಡಕಿಸಿ ಕೈಯಲ್ಲಿ ಕಟ್ಟಲು ಜ್ವರವು ದೂರವಾಗುವದು [೧೪) ಚಿತ್ತಾನಕ್ಷತ್ರದಲ್ಲಿ ತ್ರಿವೇಣಿಯ ಬೇರನ್ನು ತಂದು ನೀರಿನಲ್ಲಿ ತೆಯಿದು ಕುಷ್ಟವಿದ್ದಲ್ಲಿ ಹಚ್ಚಲು ಕುಷ್ಟವುದೂರವಾಗುವದು[೧೫] ಶ್ರೀ ಪಾರವಿಯ ಮೂಲವನ್ನು ಗಂಜಿಯಲ್ಲಿ ತೆಯಿದು ಕಣ್ಣಿಗೆ ಹಚ್ಚಲು ಕತ್ತಲೆಗುಡಿಸುವದು ಮತ್ತು ಕಣ್ಣಲ್ಲಿಯ ಹೂವು ನಾಶವಾಗುವದು (ಈ ವನಸ್ಪತಿಯು ಪುಷ್ಕರಾಶ್ರಮದ ವನದಲ್ಲಿ ಇರುವದು[೧೬] ಪಶ್ಚಿಮಕ್ಕೆ ಮುಖವನ್ನು ಮಾಡಿ ಮುಟ್ಟಲ ಮುರಿಕೆಯಬೇರನ್ನು ವಿಶಾಖಾನಕ್ಷತ್ರದಲ್ಲಿ ತಂದು ಎಡದಂಡದಲ್ಲಿ ಕಟ್ಟಲು ರೋಗವು ವಾಸಿಯಾಗುವದು (೧೭] ಅನುರಾಧಾ ನಕ್ಷತ್ರದಲ್ಲಿ ತಂದ ಕಣಗಿಲದ ಬೇರನ್ನು ಕಿವಿಯಲ್ಲಿ ಕಟ್ಟಲು, ಮಸ್ತಕ ಶೂಲೆಯು ನಿಲ್ಲುವದು [೧೮] ಜೇಷ್ಟಾನಕ್ಷತ್ರದಲ್ಲಿ ಪೂರ್ವಾಭಿಮುಖವಾಗಿ ಪಚ್ಚದ ಗಿಡದ ಬೇರನ್ನು ತಂದು ದಾರದಲ್ಲಿ ಕಟ್ಟಿ ಟೊಂಕದಲ್ಲಿ ಕಟ್ಟಲು ಶೀಘ್ರ ಪ್ರಸೂತಿಯಾಗುತ್ತದೆ. (೧೯] ಮೂಲಾ ನಕ್ಷತ್ರದಲ್ಲಿ ಪೂರ್ವಕ್ಕೆ ಮುಖಮಾಡಿ ನಿಂತುಬೇರನ್ನು ತೆಗೆದು ದಾರದಲ್ಲಿ ಪೋಣಿಸಿ ಆಕಳ ಕೋಡಿಗೆ ಕಟ್ಟಲು ಅದು ಅಧಿಕವಾಗಿ ಹಾಲನ್ನು ಕರೆಯುವದು, ಇದರಂತೆ ಪೂರ್ವಾಷಾಢಾ ನಕ್ಷತ್ರದಲ್ಲಿ ತಂದುನೀರಿನಲ್ಲಿತೆಯಿದು ಕುಡಿಸಲು ಸರ್ಪವಿಷಗಳು ಇಳಿಯುವವು (೨೦) ಉತ್ತರಾಷಾಢಾ ನಕ್ಷತ್ರದಲ್ಲಿ ದಕ್ಷಿಣ ಮುಖವಾಗಿ ನಿಂತು ಹೆಗ್ಗುರುಟಿಗೆಯ ಬೇರನ್ನು ತಂದು ಗಾದಿಯಬುಡದಲ್ಲಿ ಇಟ್ಟುಕೊಳ್ಳಲು ಉದ್ಯೋಗವು ಚನ್ನಾಗಿ ನಡೆಯುವದು (೨೧] ಶ್ರವಣಾನಕ್ಷತ್ರದ

ಳಲ್ಲಿಯೂ ಹಚ್ಚಿಕೊಂಡು ಈ ಕೆಳಗೆ ಬರೆದ ಮಂತ್ರವನ್ನು ಜಪಿಸುತ್ತ ಎಷ್ಟು ಭಾರವನ್ನಾಗಲಿ ಬೆಂಡುಪದಾರ್ಥದಂತೆ ಬೆಂಡಿನಂತೆ ಸುಲಭವಾಗಿ ಎತ್ತಿ ಕೋರಬಹುದು. ಮಂತ್ರ ॥ ಓಂ ನಮೋಭಗವತೇ ಗದಾಧರಾಯುತನಾಗಬಲಾಯ ಕೀಚಕನಿಕೃಂತನಾಯ ಮೃತ್ಯುಂಜಯಸಂಭವಾಯ ಹುಂ ಫಟ್ ಓಂ ನಮೋ ಭಗವತೇ ರಾವಣಾಯ ಲಂಕಾಧಿಪತಯೇ ಕೈಲಾಸ ಕಂದುಕಾಯ ಸರ್ವರಕ್ಷೋಧಿಪತಯೇ ಹುಂ ಫಟ್ ಓಂ ನಮೋ ಭಗವತೇ ಗೋವರ್ಧನಧರಾಯ ಗೋಪೀಮನೋವಲ್ಲಭಾಯ ಸರ್ವಭೂಭಾರಧಾರಣಾಯ ಹುಂ ಫಟ್ ಸ್ವಾಹಾ ॥ ಈ ಮಂತ್ರವನ್ನು ಮೂರು ನಕ್ಷತ್ರ ಅಥವಾ ೩ ತಿಥಿಗಳು ಕಲೆತ ದಿವಸ ಶುಚಿರ್ಭೂತನಾಗಿ ಏಕಮನಸ್ಸಿನಿಂದ ಒಂದು ಸಾವಿರ ಆವೃತ್ತಿ ಜಪಿಸಬೇಕು. ಶಾಂತಿಗಳನ್ನು ಈ ಮಂತ್ರಜಪಕ್ಕೆ ಹಿಂದೆ ಹೇಳಿದಂತೆ ಮಾಡಬೇಕು. ಈ ಮಂತ್ರವನ್ನು ಬೆಳ್ಳಿ ತಗಡಿನಲ್ಲಿ ಬರೆದು ತಾಯಿತದಲ್ಲಿ ಹಾಕಿಕೊಳ್ಳಲು ಒಳ್ಳೆಯದು.

ಬಹಳ ಭೋಜನ ಮಾಡುವದಕ್ಕೆ.

ಹಾಳಹಗೇವಿನೊಳಗೆ ಬೆಳೆದ ಔಡ್ಲ ಗಿಡದ ಬಡಗಲು (ಉತ್ತರ ದಿಕ್ಕಿಗೆ) ಹರಿದ ಬೇರನ್ನು ಪೂಜಿಸಿ ತಂದು ಉಂಗುರವನ್ನು ಮಾಡಿ ಉಡಿಯಲ್ಲಿ ಇಟ್ಟುಕೊಂಡು ಎಷ್ಟನ್ನಾದರೂ ಊಟ ಮಾಡಬಹುದು. ಉಂಗುರವನ್ನು ತೆಗೆದುಬಟ್ಟರೆ ಬೋಜನ ಮಾಡುವದು ಸಾಕಾಗುವದು.

ಇನ್ನೊಂದು ವಿಧ.

ಉತ್ತರ ದಿಕ್ಕಿಗೆ ದಾಸವಾಳದ ಬೇರು ಹರಿದದ್ದನ್ನು ತಂದು ಪೂಜಿಸಿ ಎರಡು ಉಂಗುರಗಳನ್ನು ಮಾಡಿ ಎರಡು ಕಿರಿಬೆರಳಿಗೆ ಇಟ್ಟುಕೊಂಡು ಹೊಟ್ಟೆಯನ್ನು ನೀವಿಕೊಳ್ಳುತ್ತ ಎಷ್ಟನ್ನಾದರೂ ಊಟ ಮಾಡಬಹುದು. ಹಿಂದೆ ಭಾರವೆತ್ತುವದಕ್ಕೆ ಹೇಳಿರುವ ಮಂತ್ರದಿಂದಲೂ ಬೇರುಗಳನ್ನು ತಂದು ಪೂಜಿಸಿ ಉಂಗುರಗಳನ್ನು ಮಾಡಿ ೨೧ ಸಾರಿ ಮಂತ್ರಿಸಿ ಉಪಯೋಗಿಸಬೇಕು.

ಅಥ ಸ್ತಂಭನ ಮೋಹನಾದಿ ಯಂತ್ರಭಾಗಃ.

ಶತ್ರುಮುಖ ಗತಿಸ್ತಂಭನ ಯಂತ್ರ. (೧೩) ದುಷ್ಟ ಸತ್ಪಾತ್ರ.

ಠಂ ಠಂ ಠಂ ಠಂ ಠಂ ಠಂ

ಠಂ ಠಂ ಠಂ	ರೂಂ ರ್ತ್ರಂ ರ್ಲ್ಲಂ ರ್ವ್ವಂ ರ್ರಂ ರ್ಯ್ಯಾಂ	ರೂಂ ರ್ತ್ರಂ ರ್ಲ್ಲಂ ರ್ವ್ವಂ ರ್ರಂ ರ್ಯ್ಯಾಂ	ರೂಂ ರ್ತ್ರಂ ರ್ಲ್ಲಂ ರ್ವ್ವಂ ರ್ರಂ ರ್ಯ್ಯಾಂ	ರೂಂ ರ್ತ್ರಂ ರ್ಲ್ಲಂ ರ್ವ್ವಂ ರ್ರಂ ರ್ಯ್ಯಾಂ	ರೂಂ ರ್ತ್ರಂ ರ್ಲ್ಲಂ ರ್ವ್ವಂ ರ್ರಂ ರ್ಯ್ಯಾಂ	ರೂಂ ರ್ತ್ರಂ ರ್ಲ್ಲಂ ರ್ವ್ವಂ ರ್ರಂ ರ್ಯ್ಯಾಂ	ಠ್ಠ ಠ್ಠ ಠ್ಠ

ಠಂ ಠಂ ಠಂ ಠಂ ಠಂ ಠಂ


ಮೋಚನ ಯಂತ್ರ.

ಇದಕ್ಕೆ ಓಂ ಹ್ರೀಂ ಸ್ವಾಹ ಮಂತ್ರ

ಹ್ರೀಂ

ಈ ಯಂತ್ರಕ್ಕೆ ಪೂಜಿಸುವ ಮಂತ್ರವಲ್ಲಿ ಮಂತ್ರವೂ ಇದರ ವಿಧಾನವೂ ಬರೆಯುತ್ತದೆ ನೋಡಿರಿ. ಈ ಯಂತ್ರವನ್ನು ಬರೆದು ಕಟ್ಟಿಕೊಂಡರೆ ಶತ್ರುಭಯವು ಗಜಸ್ತಂಭನವು ಆಗುವದು.


ಯಮಶತ್ರುಸ್ತಂಭನ ಯಂತ್ರವು.
ಶತ್ರುವಿನ ಮಂತ್ರ ಕುಂಭ ದೋಷ ಪರಿಹಾರ.




ಈ ಯಂತ್ರವನ್ನು ಯಾವಾಗ ಕಟ್ಟಬೇಕೋ ಆವರ ಹೆಸರನ್ನು ಈ ಸಂಧಿಯಲ್ಲಿ ಬರೆಯಬೇಕು.

ಈ ಕೆಳಗಿನ ಯಂತ್ರಗಳನ್ನು ಒಂದೆ ಅಗ್ನಿಸ್ತಂಭನಕ್ಕೆ ಕೊಡುವ ಯಂತ್ರದಿಂದ ಮಂತ್ರಿಸಿ ಭೂರ್ಜಪತ್ರದಲ್ಲಿ ಸಂಸ್ಕರಿಸಿದ ಬರೆದು ಕಟ್ಟಿಕೊಳ್ಳಬೇಕು.

ಅಗ್ನಿಸ್ತಂಭನ ಯಂತ್ರವು.




ಮತ್ತೊಂದು ವಿಧ ಅಗ್ನಿಸ್ತಂಭನ ಯಂತ್ರ.



ಅಥ ಆಕರ್ಷಣ ಯಂತ್ರಗಳು

ಮೊದಲು ವಿಧ



ಈ ಯಂತ್ರವನ್ನು ಭೂರ್ಜಪತ್ರದಲ್ಲಿ ಬರೆದು ಒಳಗೆ ಬ್ರಾಕೆಟ್ಟಿನಲ್ಲಿ ಸಾಧ್ಯರ ಹೆಸರನ್ನು ಬರೆದು ಹಿಂದೆ ಹೇಳಿದ ಆಕರ್ಷಣ ಮಂತ್ರದಲ್ಲಿ ಬರೆದು ಮಂತ್ರದಿಂದ ಮಂತ್ರಿಸಿ ಕಟ್ಟಬೇಕು.

ಎರಡನೆ ವಿಧ



ಈ ಯಂತ್ರವನ್ನು ತ್ರಿಲೋಹದ ತಗಡಿನಲ್ಲಿ ಬರೆದು ಹಿಂದೆ ಹೇಳಿದ ಆಕರ್ಷಣ ಮಂತ್ರದ ಮಂತ್ರದಿಂದ ಮಂತ್ರಿಸಿ ಈ ಬ್ರಾಕೆಟ್ಟಿನಲ್ಲಿ ಹೆಸರನ್ನು ಬರೆದು ಕಟ್ಟಿಕೊಳ್ಳಬೇಕು.

ಶ್ಲೋಕ ॥ ಕುಂಡೇಯೋನ್ಯಾಕೃತೇಹುನೇತ್ ॥ ಎಂಬದಾಗಿ ಹೇಳಿರುವದ ರಿಂದ ತ್ರಿಕೋಣಾಕಾರವಾಗಿ ಒಂದು ಕುಂಡವನ್ನು (ಗುಂಡಿಯನ್ನು) ತೆಗೆದು ಅದ ರಲ್ಲಿ ಈ ಕೆಳಗೆ ಬರೆದ ಪುಷ್ಪಗಳಿಂದ ಹೋಮವನ್ನು ಮಾಡಲು ವಿಶೇಷ ಫಲವುಂ ಟಾಗುವದು. ಆ ಫಲಾದಿಗಳನ್ನು ಅಲ್ಲಿಯೇ ಬರೆದಿರುತ್ತವೆ.

ಶ್ಲೋ ॥ ಜಂಬುಭಿರ್ಧನಧಾನ್ಯಾಪ್ತಿಸ್ತುಷ್ಟಿರ್ನೀಲೋತ್ಪಲೈರಪಿ ।
ರಕ್ತೋತ್ಪಲೈರ್ಮಹಾಪುಷ್ಟಿಃ ಕುಂದಪುಷ್ಪೈರ್ಮಹೋದಯಃ ॥
ಮಲ್ಲಿಕಾಭಿಃಪುರಕ್ಷೋಭಃ ಕುಮುದೈರ್ಜನವಲ್ಲಭಃ ।
ಅಶೋಕೈಃಪುತ್ರಲಾಭಸ್ಸ್ಯಾತ್ ಪಾಟಲಾಭಿಸ್ಸುಭಾಂಗನಾಃ ॥
ಆಮ್ರೈರಾಯುಸ್ತಿಲೈರ್ಲಕ್ಷ್ಮೀರ್ಬಿಲ್ವೈತ್ರಿರ್ಶ್ರೇಷ್ಟವೃಕ್ಷೈರ್ಧನಂ ।
ಇಷ್ಟಂಮಧುಕಪುಷ್ಪೈಶ್ಚ ಬಿಲ್ವೈಸ್ಸರ್ವಜ್ಞತಾಂಲಭೇತ್ ॥

ಈ ಮಂತ್ರಸಿದ್ಧಿಯನ್ನು ಮಾಡುವವರು ಯಾವ ಫಲವನ್ನು ಕುರಿತು ಹೋಮವನ್ನು ಮಾಡುತ್ತಾರೋ ಆ ಪುಷ್ಪಗಳಿಂದ, ಆ ಎಲೆಗಳಿಂದ, ಆ ಬೇರು ಗಳಿಂದ ಹೋಮವನ್ನು ಮಾಡಬಹುದು, ಎಲ್ಲ ಫಲವೂ ಬೇಕಾದವರು ಎಲ್ಲ ವಿಧವಾದ ಪುಷ್ಪ-ಪತ್ರ-ಮೂಲಗಳಿಂದಲೂ ಹೋಮಾದಿಗಳನ್ನು ಮಾಡಬೇಕು.

ನೇರಲಗಿಡದ ಹೂ. ಎಲೆ, ಬೇರು ಇವುಗಳಿಂದ ಹೋಮ ಪೂಜಾದಿಗಳನ್ನು ಮಾಡಲು ಧನಧಾನ್ಯ ಸಮೃದ್ಧಿ; ನೀಲೋತ್ಪಲದ ಹೂ, ಎಲೆ, ಬೇರು ಇವುಗಳಿಂದ ಹೋಮ ಮಾಡಲು ಸಂತೋಷವು; ರಕ್ತೋತ್ಪಲಗಳಿಂದ ಹೋಮ ಮಾಡಲು ಶರೀರಕ್ಕೆ ಬಲವು; ಸೂಜಿಮಲ್ಲಿಗೆ ಹೂವುಗಳಿಂದ ಹೋಮ ಮಾಡಲು ಐಶ್ವರ್ಯ; ಮಲ್ಲಿಗೆಯ ಪುಷ್ಪಗಳಿಂದ ಹೋಮ ಮಾಡಲು ಪಟ್ಟಣಕ್ಕೆ ಯಾವ ತೊಂದರೆಯೂ ಬರುವದಿಲ್ಲ, ಕುಮುದ ಪುಷ್ಪಗಳಿಂದ ಹೋಮ ಮಾಡಲು ಜನವಶ್ಯ; ಅಶೋಕ ಪುಷ್ಪಗಳಿಂದ ಪೂಜಾದಿಗಳನ್ನು ಮಾಡಲು ಸಂತಾನಪ್ರಾಪ್ತಿ; ಪಾದರಿ ಹೂವು ಗಳಿಂದ ಹೋಮ ಮಾಡಲು ಸ್ತ್ರೀಯರು ಒಲಿವರು; ಮಾವಿನ ಹುವ್ವುಗಳಿಂದ ಹೋಮ ಮಾಡಲು ಆಯುರ್ವೃದ್ಧಿ; ಎಳ್ಳು ಹೂವ್ವುಗಳಿಂದ ಹೋಮ ಮಾಡಲು ಸಂಪದವು; ಇಪ್ಪೆ ಹೂವ್ವುಗಳಿಂದ ಹೋಮ ಮಾಡಲು ಇಷ್ಟಕಾರ್ಯಸಿದ್ಧಿ; ಬಿಲ್ವಪತ್ರಿಗಳಿಂದ ಪೂಜಾದಿಗಳನ್ನೂ ಹೋಮವನ್ನೂ ಮಾಡಲು ಯಜ್ಞ ಮಾಡಿದ ದೀಕ್ಷಿತನು ಸರ್ವ ಕರ್ಮಗಳಿಗೂ ಸ್ವತಂತ್ರನಾದಂತೆ. ಈ ಸಾಧಕನು ಸರ್ವಸಿದ್ಧಿ ಗಳಲ್ಲಿಯೂ ಸ್ವತಂತ್ರನಾಗುವನು.

ಅಥ ನಾರಸಿಂಹ ಮಂತ್ರ.

ಮಂತ್ರ ॥ ಓಂಕ್ಷ್ರಾಂ ನಮೋ ಭಗವತೇ ನಾರಸಿಂಹಾಯ ಜ್ವಾಲಾಮಾಲಿನೇ ದೀಪ್ತದಂಷ್ಟ್ರಾಯಾಗ್ನಿ ನೇತ್ರಾಯ ಸರ್ವರಕ್ಷೋಘ್ನಾಯ ಸರ್ವಭೂತ ವಿನಾಶಾಯ ಸರ್ವಜ್ವರ ವಿನಾಶಾಯ ದಹದಹ ಪಚಪಚ ರಕ್ಷರಕ್ಷ ಹ್ರೂಂ ಫಟ್ ಸ್ವಾಹಾ ॥

❀ ೩ ದಿನ ೩ ತಿಂಗಳು ೩ ವರ್ಷದ ಕೂಸಿಗೆ ಕಟ್ಟುವ ಯಂತ್ರ

	ದುರ್ಗ	ಪಾ		
	ಯೋಃ ೫	ಧ	ಕೀ	
	ಸು	ಭ	ಜಾ	

❀ ೪ ದಿನ ೪ ತಿಂಗಳು ೪ ವರ್ಷದ ಕೂಸಿಗೆ ಕಟ್ಟುವ ಯಂತ್ರ.

ಓಂ	ರ್ದ್ದ	ರ್ದ್ದ	ಸ
ಹೊ	ಹೊ	ಹಿ	ಸ
ಹಾ	ಹೊ	ಮ	ರ
ದ	ಹ	ಹ	ದಾ

❀ ೫ ದಿನ ೫ ತಿಂಗಳು ೫ ವರ್ಷದ ಕೂಸಿಗೆ ಕಟ್ಟುವ ಯಂತ್ರ.

ಓಂ		ಓಂ
	ಹ್ರೀಂ	
ಓಂ		ಓಂ

❀ ೬ ದಿನ ೬ ತಿಂಗಳು ೬ ವರ್ಷದ ಕೂಸಿಗೆ ಕಟ್ಟುವ ಯಂತ್ರ

ಸ	ಸ್ವ ಅಂ	ಸ
	ಯಂ	

❀ ೭ ದಿನ ೭ ತಿಂಗಳು ೭ ವರ್ಷದ ಕೂಸಿಗೆ ಕಟ್ಟುವ ಯಂತ್ರ.

ಹಿ ನೀ ಮ ಹೀ ಸ್ವಾ ಹಾ	ಶತ್ರ್ವ

ರೋಗಗಳಿಲ್ಲದವರಾಗಿಯೂ ಇರುವದರಿಂದ ಅವರಿಗೆ ಈ ಕ್ಷುದ್ರರೋಗ
ಪ್ರಾಪ್ತವಾಗುವದಿಲ್ಲ. ಒಂದು ವೇಳೆ ಜ್ವರವು ಬಂದರೂ, ಲಂಘನಂ ಕೀ
ಷಧಂ ॥ ಎಂಬದಾಗಿ ಈ ನಮ್ಮ ಮನೆಯ ಹಿರಿಯರು ಹೇಳುವ ಪ್ರಮಾಣದಿಂದ
ಜ್ವರಾನುಸಾರ ಒಂದು ದಿನ ಮೊದಲು ೨೧ ದಿವಸದವರೆಗೂ ಲಂಘನ
ಮಾಡುತ್ತಿದ್ದರು. ಇದಕ್ಕೆ ಮೀರಿ ವ್ಯಾಧಿಪ್ರಕೋಪವಾದರೆ ಅತಿಸಾರ,
ಕ್ಷಯ, ಕುಷ್ಠ ಮುಂತಾದ ಬಲವತ್ತರ ರೋಗಗಳುಂಟಾಗುತ್ತಿದ್ದವು.
ಲೋಹ, ಮಂಡೂರ ಮುಂತಾದ ಔಷಧಿಗಳಿಂದಲೇ ಚಿಕಿತ್ಸಾದಿಗಳನ್ನು
ತ್ತಿದ್ದರು. ಈಗಿನ ನಮ್ಮ ನವನಾಗರಿಕತೆಯುಳ್ಳ ಜನಸಾಮಾನ್ಯಕ್ಕೆ
ವಿಧವಾದ ವ್ಯಾಧಿ ಬಂದರೂ ವಿಶೇಷವಾಗಿ ಅನ್ನ, ಹಾಲು, ರವೆ, ಸಕ್ಕರೆ
ದವುಗಳನ್ನು ಉಪಯೋಗಿಸಬೇಕೇ ಹೊರತು ಮನೆಯ ಹಿರಿಯರು ಹೇಳ
ಲಂಘನ ಮಾಡಿದರೆ ದೇವಲೋಕಕ್ಕೆ ಸೇರುವರು. ಇದಕ್ಕೆ ಕಾರಣವೇನ
ಹುಟ್ಟಿದ ೧೦ ವರ್ಷದೊಳಗೆ ಪುರುಷರಿಗೂ, ೫-೬ ವರ್ಷಗಳಿಗೆ ಸ್ತ್ರೀಯ
ಬಾಲ್ಯವಿವಾಹವನ್ನು ಮಾಡುವದರಿಂದ ಈಗಿನ ನಾಗರಿಕತೆಗೆ ಸರಿಯಾಗಿ
ನಂತರ ೨-೩ ವರ್ಷದೊಳಗೆ ಆ ಇಬ್ಬರೂ ಸಂಸಾರಸುಖವನ್ನು ಹೊಂದು
ರಾಗಿ ಬರುವರು. ಇಂತಹ ಎಳೆಯ ಕೂಸುಗಳ ಅವಯವಗಳೊಳಗಣ
ವೆಂಥಾದ್ದೋ ಆ ಅವಯವಗಳಿಂದ ಹುಟ್ಟಿದ ಕೂಸುಗಳ ಅವಯವಗಳು
ದೃಢವಾಗಿರುವವೋ ನೀವೇ ಆಲೋಚಿಸಿರಿ. ಇಂತಹ ಎಳೆಯ ಅಂಗ
ಬರುವ ರೋಗಗಳಿಗೆ ವಿಶೇಷ ತೀಕ್ಷ್ಣವಾದ ಚಿಕಿತ್ಸಾದಿಗಳು ಕೂಡ
ಗಕ್ಕೆ ಬರುವದಿಲ್ಲ. ಏಕೆಂದರೆ, ಈಗ ಅನೇಕರಿಗೆ ಬರುವ ರೋಗಗಳೆಲ್ಲವೂ
ಸ್ತ್ರೀಯರ ಸಂಭೋಗದಿಂದ ಕೆಲವರಿಗೂ, ಅಕ್ರಮ ಪ್ರವರ್ತನಗಳಿಂದ ಕೆಲವ
ಆಹಾರವಿಶೇಷದಿಂದ ಕೆಲವರಿಗೂ, ವಾತ-ಶೀತೋಷ್ಣಗಳು ಪ್ರಕೋಪ
ಶುಕ್ಲಶೋಣಿತ ಮೂತ್ರಸ್ಥಾನಗಳಲ್ಲಿ ದೋಷವುಂಟಾಗಿ ಕೆಟ್ಟ ಬೆವರು
ಕಾಲದಲ್ಲಿ ಆ ಬೆವರು ಮೇಹೋಷ್ಮವಾದರೆ ಮೇಹಸಂಬಂಧವೆಂತಲೂ,
ಷ್ಮವಾದರೆ ವಾತರೋಗವೆಂತಲೂ, ಶ್ಲೇಷ್ಮೋಷ್ಮವಾದರೆ ಛರ್ದಿ
ಪಿತ್ತೋಷ್ಮವಾದರೆ ಪಿತ್ತರೋಗವೆಂತಲೂ ಹೀಗೆ ರೋಗಗಳು ಬರುವವು
ಈ ಬಾಲ್ಯವಿವಾಹವೊಂದಲ್ಲದೆ "ಘೃತಕುಂಭಸಮಾಃಪುಮಾನಗ್ನಿ ಕುಂಡಸಮಾ
ನಾ" ಎಂಬ ವಚನಾಮು ಸಾರವಾಗಿ ಈಗಿನ ಕಾಲಕ್ಕೆ ಸಾಧಾರಣವಾಗಿ
ಸಂಭೋಗದಿಂದಲೇ ವಿಶೇಷವಾಗಿ ನಾನಾರೋಗಗಳು ಬರುವವು.
ಯೊಬ್ಬರೂ ಇಂತಹ ಅಕ್ರಮಕ್ಕೆ ಬಾರದಿದ್ದರೂ ಆ ಮನೆತನದೊಳಗೆ
ಮಾಡಿದ್ದರೂ ಬೀಜಕ್ಷೇತ್ರ ಸಂಬಂಧದಿಂದ ತಲಾಂತರಗಳವರೆಗೂ
ಬರುವದುಂಟು. ಇಂತಹ ಸಂಬಂಧದಿಂದ ಬರುವ ರೋಗಗಳಿಗೆ ಚಿಕಿ

ಲಂಘನ ಹಾಕಬ
ರದು. ಸುಲಭವ
ತಮ್ಮ ತಮ್ಮ
ಮಾಡಿಕೊಳ್ಳಲನು
ಈ ವ್ಯಾಧಿಗಳಿಗು
ಗಳಿಗೂ ಅನುಕ
ಈ ಗ್ರಂಥದಲ್ಲಿ
ಜ್ವರ, ಅಜೀರ್ಣ
ಚೆನ್ನಾಗಿ ಬರೆದಿರು
ಆಮೂಲಾಗ್ರವಾಗಿ
ಹೊಂದಿರಿ.

ಅಥ ಆರೂಢ

ಶ್ಲೋ ॥ ಭಾಸ್ವದ್ವನಾ
ಭಜಂತಿಯಂಶ

ಶ್ಲೋ ॥ ತಿಕ್ತೋ
ಧಾರ
ಕ್ರಿಯ
ಗ್ರೀಷ
ಪಿತ್ತಾ
ಶರನ್ನ
ಸ್ವಾದ

ಅಸ್ವಾಸ್ಥಸ್ಯ ಸುಖಾಜೀರ್ಣ ದಿವಾಸ್ವಪ್ನಾತಿ ಬೃಂಹಣೈಃ ॥
ಪ್ರಚ್ಛರ್ದನಾದ್ಯಯೋಗೇನ ಭುಕ್ತಮಾತ್ರವಸಂತಯೋಃ ।
ಪೂರ್ವಾಹ್ಣೇ ಪೂರ್ವರಾತ್ರೇ ಚ ಶ್ಲೇಷ್ಮಾದ್ದ್ವಂದ್ವಸ್ತು ಸಂಕರಾತ್
ತ್ರಿಧಾಭಾವಾತ್ಸಮಸ್ತಾನಾಂ ಸನ್ನಿಪಾತಸ್ತಥಾಪುನಃ ।
ನಿದಾನಾರ್ಥಕರೋಗೋ ರೋಗಸ್ಯಾಪ್ಯುಪಜಾಯತೇ ॥

ತಾತ್ಪರ್ಯ :—ಅಧಿಕವಾಗಿ ಕಹಿ (ವಿಷ) ಪದಾರ್ಥಗಳು, ಖಾರ, ... ಈ ಪದಾರ್ಥಗಳನ್ನು ತಿನ್ನುವದರಿಂದಲೂ, ಬಹಳ ಸ್ವಲ್ಪವಾಗಿ ಭುಜಿಸುವದರಿಂದಲೂ, ರೂಕ್ಷಪದಾರ್ಥಗಳನ್ನು ತಿನ್ನುವದರಿಂದಲೂ, ಕಾಲವನ್ನ ಶಿಕ್ಷಿಸಿ ಭೋಜನ ಮಾಡುವದರಿಂದಲೂ ಸಕಾಲಕ್ಕೆ ವಾಯುವು ಮೂತ್ರಪುರೀಷ (...) ಗಳನ್ನು ಬಿಡದೆ ಇರುವದರಿಂದಲೂ, ಅಪಾನವಾಯುವನ್ನು ಬಲಾತ್ಕಾರ... ತಂಸುವಿಕೆ ರಾತ್ರಿಯಲ್ಲಿ ನಿದ್ರೆಯನ್ನು ಮಾಡದಿರೋಣ ಗಟ್ಟಿಯಾಗಿ ಮಾತಾಡು... ವಿಕೆ, ವಮನವಿರೇಚನಗಳನ್ನು ಅಧಿಕವಾಗಿ ತರಿಸುವಿಕೆ, ವಿಶೇಷ... ಭಯ-ಚಿಂತೆ-ಶ್ರಮ-ದುಃಖ ಸ್ತ್ರೀಸಂಭೋಗ ಈ ಕೆಲಸಗಳನ್ನು ಮಾಡುವದರಿಂ ದಲೂ, ಗ್ರೀಷ್ಮಕಾಲದಲ್ಲಿ ಹಗಲು ೪ ಘಂಟೆಗೂ ರಾತ್ರಿ ೧೨-೧ ಘಂಟೆಗ... ಭೋಜನ ಮಾಡುವದರಿಂದಲೂ, ಶರತ್ಕಾಲದಲ್ಲಿ ಮಧ್ಯಾಹ್ನಕಾಲದಲ್ಲಿಯೂ ಅರ್ಧರಾತ್ರಿಯಲ್ಲಿಯೂ ಭುಜಿಸುವದು, ಬಿಸಿಲುಕಾಲದಲ್ಲಿ ಪಿತ್ತಾಧಿಕ್ಯವಾಗುವ ದೆಂದೂ ವಿಶೇಷ ಮಧುರ ರಸಗಳನ್ನೂ ಹುಳಿ ಪದಾರ್ಥಗಳನ್ನೂ ಲವಣ ... ಳನ್ನು ಭುಜಿಸುವದರಿಂಥಲೂ ಸ್ನಿಗ್ಧ (ಎಣ್ಣೆ ಪದಾರ್ಥಗಳು) ಅಜೀರ್ಣಕರ... ಮಾಂಸ ಮುಂತಾದ ಪದಾರ್ಥಗಳು ನೆಗಡಿ ಮಾಡುವ ಶೀತಲ ಪದಾರ್ಥ... ಇವನ್ನು ಭುಜಿಸುವದು, ಯಾವಾಗಲೂ ಕುಳಿತುಕೊಂಡಿರುವದು, ಅಧಿಕ... ನಿದ್ರೆಯನ್ನು ಮಾಡುವದು ಶರೀರಕ್ಕೆ ಪುಷ್ಟಿಕರವಾದ ಪದಾರ್ಥಗಳನ್ನು ವಿಶೇಷ ವಾಗಿ ಭುಜಿಸುವದು, ಈ ಕಾರಣಗಳಿಂದ ಬಗೆಬಗೆಯ ರೋಗಗಳು ಹುಟ್ಟುವವು. ಹೇಗೆಂದರೆ, ಮೇಲೆ ಹೇಳಿದ ಕಾರಣಗಳೊಳಗೆ ಭೋಜನಾನಂತರದಲ್ಲಿ ಆಗಲಿ ವಸಂತಕಾಲದಲ್ಲಿ ಆಗಲಿ ಹಗಲಿನ ಪೂರ್ವಭಾಗದಲ್ಲಿ ಆಗಲಿ ಕಫವು ಪ್ರಕೋಪ ವಾಗಿ ಇರುವದರಿಂದ ಎರಡೆರಡು ಕಾರಣಗಳಿಂದ ಕಲೆಯಲು ದೋಷದ್ವಯ (ವಾತಪಿತ್ತಗಳು) ಪ್ರಕೋಪಕ್ಕೆ ಬಂದು ವಾತಪಿತ್ತ ಸಂಬಂಧವಾದ ರೋಗಗಳು ಟಾಗುವದೆಂತಲೂ. ಮೇಲೆ ಹೇಳಿದ ಕಾರಣಗಳೆಲ್ಲವೂ ಕಲೆಯಲು ತ್ರಿದೋಷಗಳು (ವಾತ ಪಿತ್ತ-ಶ್ಲೇಷ್ಮಗಳು) ಪ್ರಕೋಪಿಸಿರುವ ರೋಗವೆಂತಲೂ ಹುಟ್ಟುವವು ಮತ್ತು ಈ ಹುಟ್ಟಿದ ರೋಗವು ಮತ್ತೊಂದು ರೋಗಕ್ಕೆ ಕಾರಣವಾಗಿ ಎಂತಹ ರೋಗಗಳು ಪೀಡಿಸುವವು. ಹೇಗೆಂದರೆ, ಜ್ವರದ ಸಂತಾಪದಿಂದ ರಕ್ತಪಿತ್ತ... ರಕ್ತಪಿತ್ತದಿಂದ ಜ್ವರವು. ಈ ಮೂರರಿಂದ ಶೋಫವು ಸರಗಳು ಉಬ್ಬು... ಇವು ಬರುವದು. ಈ ಉಬ್ಬು ಪಿತ್ತ...

ಮಹೋದ...
ಶೂಲೆ, ಗು...
ಗುಲ್ಮ ರೋ...
(ಕೆಮ್ಮು) ...
ಗಳನ್ನು ...
ಅನೇಕ ರೋ...
ಗಳಿಗೂ ...
ಪ್ರವರ್ತಕರಾ...
ರಿಂದ ಮೊದ...
ಅದಕ್ಕೆ ಚಿಕಿತ್ಸೆ...

ಶ್ಲೋ ॥

ತಾತ್ಪರ್ಯ...
ಇರುವದು, ದ...
ದೇಹದ ಎಲ್ಲ ಅ...
ದಲ್ಲಿ ಎಲ್ಲವೂ ಸ...

ಶ್ಲೋ ॥

ತಾತ್ಪರ್ಯ...
ಕೆರುಗುಳ್ಳ ಇವುಗ...
ಪ್ರಥಮ ಜ್ವರಕ್ಕೆ...
ಸಾಪರಿಸಿಂಚತಿ "...
ಕ್ರಿಯೆಗಳಿಂದಾಗಲಿ...
ಸಿಲ್ಲುವದು.

ಇ...

ಶ್ಲೋ ॥

೮ ದಿನ ೮ ತಿಂಗಳು ೮ ವರ್ಷದ ಕೂಸಿಗೆ ಕಟ್ಟುವ ಯಂತ್ರ.

ಓಂ ನಮಃ ಪರ್ವಃ
ತಸ್ವಹಾ

೯ ದಿನ ೯ ತಿಂಗಳು ೯ ವರ್ಷದ ಕೂಸಿಗೆ ಕಟ್ಟುವ ಯಂತ್ರ.



೧೦ ದಿನ ೧೦ ತಿಂಗಳು ೧೦ ವರ್ಷದ ಕೂಸಿಗೆ ಕಟ್ಟುವ ಯಂತ್ರ,

ಓಂ	ಸಂ	ದರ್
ಕ್ಸಾ	ಹ್ರೀ	
ಸ್ವಾ	ಹ್ರಾ	ಚಾ

೧೧ ದಿನ ೧೧ ತಿಂಗಳು ೧೧ ವರ್ಷದ ಕೂಸಿಗೆ ಕಟ್ಟುವ ಯಂತ್ರ.

ಓಂ ಜಾ ನ ಗೆ
ಓಂ ಕ್ಲೋ ಕ್ಲೋ
ಸ್ವಾ ಕ್ಷಿ ಸ್ವಾ ಹ್ರ

೧೨ ದಿನ ೧೨ ತಿಂಗಳು ೧೨ ವರ್ಷದ ಕೂಸಿಗೆ ಕಟ್ಟುವ ಯಂತ್ರ.

ಓಂ ಸತ್ಯ ಸಗಸ್ವ
ಸಪ್ರೆ ಕ್ಷೈತ್ರ ದಿ

ಈ ಯಂತ್ರಗಳನ್ನು ಪಂಚಲೋಹದ ತಗಡಿನಲ್ಲಿ ಬರೆದು ಹಿಂದೆ ಹೇಳಿದ ಪ್ರಕಾರ ಆಯಾ ದಿವಸ-ತಿಂಗಳು-ವರ್ಷದ ಕೂಸುಗಳಿಗೆ ಹಿಂದೆ ಹೇಳಿದ ಮಂತ್ರಗಳಿಂದ ಮಂತ್ರಿಸಿ ಪೂಜೆಯನ್ನು ಮಾಡಿ ಕಟ್ಟಲು ಬಂದ ತೊಂದರೆ ನಿವಾರಣೆಯಾಗುತ್ತದೆ. ಇತಿ ಬಾಲಗ್ರಹ ಯಂತ್ರವಿಧಾನಯೋಗಸ್ಸಮಾಪ್ತಃ.

ಗರ್ಭಧಾರಣ ಯಂತ್ರ.

೨೮	೩೫	೨	೭
೬	೩	೩೨	೩೧
೩೪	೨೯	೮	೧
೪	೫	೩೦	೩೩

ಈ ಯಂತ್ರವನ್ನು ಪಂಚಲೋಹದ ತಗಡಿನಲ್ಲಿ ಬರೆದು ಭುಜಪತ್ರಿ ನವಾಸಾಗ್ರವನ್ನು ಹಾಕಿ ಹಿಂದೆ ಹೆಸರನ್ನು ಬರೆದು ಪೂಜಿಸಿ ಧರಿಸಿಕೊಂಡರೆ ಬಾಲಗ್ರಹ ಪೀಡೆ ನಿವಾರಣೆಯಾಗಿ ಗರ್ಭಧಾರಣೆಯಾಗುವದು.

ಲಂಘನ ಹಾಕಬಾರದು. ವಿಶೇಷವಾದ ಘನೌಷಧಗಳನ್ನು ಉಪಯೋಗಿಸಬಾರದು. ಸುಲಭವಾಗಿ ಅವರವರೇ ಸಾಧ್ಯವಾದಮಟ್ಟಿಗೆ ವೈದ್ಯಸಹಾಯವಿಲ್ಲದೆ ತಮ್ಮ ತಮ್ಮ ಹಿತ್ತಲಲ್ಲಿ ಬೆಳೆದಿರುವ ಗಿಡಮೂಲಿಕೆಗಳಿಂದಲೇ ಚಿಕಿತ್ಸಾದಿಗಳನ್ನು ಮಾಡಿಕೊಳ್ಳಲನುಕೂಲವಾಗುವಂತೆ ಇರಬೇಕೆಂದು ನಾನು ಈಗಿನ ಕಾಲಕ್ಕೂ ಈ ವ್ಯಾಧಿಗಳಿಗೂ ಈಗಿನ ಶರೀರಗಳ ಪ್ರಕೃತಿಗಳಿಗೂ ಈಗಿನ ಶೀತೋಷ್ಣ ಸ್ಥಿತಿಗಳಿಗೂ ಅನುಕೂಲವಾಗಿಯೂ ಅನುಭವಸಿದ್ಧವಾಗಿಯೂ ಇರುವ ಔಷಧಗಳನ್ನೇ ಈ ಗ್ರಂಥದಲ್ಲಿ ಬರೆಯಲು ನಿಶ್ಚಯಿಸಿದ್ದೇನೆ. ಮತ್ತು ಚಿಕ್ಕಹುಡುಗರಿಗೆ ಬರುವ ಜ್ವರ, ಅಜೀರ್ಣರೂಪವಾದ ಬಾಲಗ್ರಹಾದಿಗಳ ಔಷಧ ಚಿಕಿತ್ಸಾದಿಗಳನ್ನೆಲ್ಲ ಚೆನ್ನಾಗಿ ಬರೆದಿರುತ್ತೇನೆ. ಸದಾಸ್ತಿಕ ಜನರೆಲ್ಲರೂ ದಯವಿಟ್ಟು ಈ ಗ್ರಂಥವನ್ನು ಆಮೂಲಾಗ್ರವಾಗಿ ಪರೀಕ್ಷಿಸಿ ಮನಸ್ಸಿಗೆ ತಂದು ಎಲ್ಲರೂ ಆರೋಗ್ಯಸುಖವನ್ನು ಹೊಂದಿರಿ.

ವಿದ್ವಜ್ಜನ ವಿಧೇಯ,
ಸಿದಾಂತಿ ವಿರೂಪಾಕ್ಷಶಾಸ್ತ್ರಿ,
ವೀರಶೈವ ಮತೋಜ್ಜೀವಿನಿ,
ಭಿಷಂಗ್ರಾಜೌಷಧಾಲಯ,
ಹರಪನಹಳ್ಳಿ.

ಶ್ರೀಗುರು ಕೊಟ್ಟೂರೇಶ ರಕ್ಷಿಸು.


ಅಥ ಆರೂಢ ಪ್ರಶ್ನ ಚಂದ್ರಿಕಾಯಾಂ ವನೌಷಧಿ ಭಾಗಃ

ಮಂಗಳ ಶ್ಲೋಕಃ

ಶ್ಲೋ॥ ಭಾಸ್ವದ್ವನೌಷಧ್ಯಧಿಪಾಮರೇಜ್ಯಾಶ್ರೀ ಮಾಧವಾಗಸ್ತ್ಯ ಕಚಕದತ್ತಾಂ॥
ಭಜಂತಿಯಂಶಂಕರಮೇವನಿತ್ಯ ಮಾರೋಗ್ಯ ಭಾಗ್ಯಾಯತಮದ್ಯವಂದೇ॥

ಅಥ ರೋಗನಿದಾನವು.

ಶ್ಲೋ॥ ತಿಕ್ತೋಷಣಕಷಾಯಾಲ್ಪ ರೂಕ್ಷಪ್ರಮಿತಭೋಜನೈಃ।
ಧಾರಣೋದೀರಣನಿಶಾ ಜಾಗರಾತ್ಯುಚ್ಚಭಾಷಣೈಃ॥
ಕ್ರಿಯಾತಿಯೋಗಭೀಶೋಕ ಚಿಂತಾವ್ಯಾಯಾಮಮೈಥುನೈಃ।
ಗ್ರೀಷ್ಮಾ ಹೋರಾತ್ರಿಜುಕ್ತಾಂತೇ ಪ್ರಕುಪ್ಯತಿಸಮೀರಣಃ॥
ಪಿತ್ತಾಂಕಲ್ವಾಮ್ಲ ತೀಕ್ಷ್ಣೋಷ್ಣ ಪಟುಕ್ರೋಧವಿದಾಹಿಭಿಃ।
ಶರನ್ಮಧ್ಯಾಹ್ನ ರಾತ್ರ್ಯರ್ಧ ವೇದಾಹಸಮಯೇಷುಚ॥
ಸ್ವಾದ್ವಾಮ್ಲಲವಣಸ್ನಿಗ್ಧ ಗುರ್ವಭಿಷ್ಯಂದಿಶೀತಲೈಃ।



ಈ ಯಂತ್ರವನ್ನು ಪಂಚಲೋಹದ ತಗಡಿನಲ್ಲಿ ಬರೆದು ಬ್ರಾಕೆಟ್ಟಿನಲ್ಲಿ ಯಾರ ಹೆಸರನ್ನಾಗಲಿ ಬರೆದು ಹಿಂದೆ ಹೇಳಿದ ಮಂತ್ರದಿಂದ ಮಂತ್ರಿಸಿ ಕಟ್ಟಿಕೊಳ್ಳಬೇಕು.

ವಿವಾದ ಜಯಯಂತ್ರ

ದೇ

ಜಿ			ಇ
	ಓಂ	ಓಂ	
	ಓಂ	ಓಂ	

ದ

ಈ ಯಂತ್ರವನ್ನು ಭುಜಪತ್ರೆಯಲ್ಲಿ ಬರೆದು ಪೂಜಿಸಿ ಕಟ್ಟಿಕೊಳ್ಳಬೇಕು.

ಇಂದ್ರಿಯಸ್ತಂಭನ ಯಂತ್ರ

ಓಂ

ಠ್ರೀಂ				ಠ್ರೀಂ
	ಮಃ	ಸಾ	ಮಃ	
	ಮಃ	ಸಾ	ಮಃ	

ಓಂ

ಈ ಯಂತ್ರವನ್ನು ವೀಳ್ಯದೆಲೆಯಲ್ಲಿ ಮುಳ್ಳಿನಿಂದ ಬರೆದು ಪೂಜಿಸಿ ಎಷ್ಟು ಹೊತ್ತು ದವಡೆಯಲ್ಲಿ ಇಟ್ಟುಕೊಂಡಿದ್ದರೂ ಅಲ್ಲಿಯವರೆಗೂ ಇಂದ್ರಿಯ ಸ್ತಂಭನವಾಗುವದು.

ಛಳಿಜ್ವರದ ಯಂತ್ರ.

ಸೀ	ಶ್ರೀ	ನ	ಹ	ರ
ಶ್ರೀ	ರ	ಹ	ಸೀ	ನ
ಹ	ನ	ಶ್ರೀ	ರ	ಸೀ
ರ	ಹ	ಸೀ	ನ	ಶ್ರೀ
ನ	ಸೀ	ರ	ಶ್ರೀ	ಹ

ಈ ಯಂತ್ರವನ್ನು ತಾಮ್ರದ ತಗಡಿನಲ್ಲಿ ಬರೆದು ಷೋಡಶೋಪಚಾರಗಳಿಂದ ಪೂಜಿಸಿ ಧರಿಸಿಕೊಳ್ಳಲು, ಛಳಿ ...ರ ನಿವಾರಣೆಯಾಗುವದು.

ಲ್ಲಿ ಮುಂಡೀಕಸದ ಬೇರನ್ನು ಪೂರ್ವಾಭಿ ಮುಖವಾಗಿ ತಂದು ತಲೆಗಿಂಬಿನಲ್ಲಿ ಇಟ್ಟುಕೊಳ್ಳಲು, ಚೋರಭಯವು ಇಲ್ಲದಂತಾಗುವದು [೨೨)ಧನಿಷ್ಠಾನಕ್ಷತ್ರದಲ್ಲಿ ಪೂರ್ವಕ್ಕೆ ಮುಖನಾಡಿ ಕಡವಲ ಮರದ ಬೇರನ್ನುತಂದು ಕೈಯಲ್ಲಿ ಕಟ್ಟಲು, ಚಳಿಯು ನಿಲ್ಲುವದು [೨೩] ಶತತಾರಕಾ ನಕ್ಷತ್ರದಲ್ಲಿ ಉತ್ತರಾಭಿ ಮುಖವಾಗಿ ದೇವದ್ವಾರದ ಬೇರನ್ನುತಂದು ಬಕ್ಕಣದಲ್ಲಿಟ್ಟುಕೊಳ್ಳಲು ಬಳಿಯಲ್ಲಿಡು ಹಣಕ್ಕೆ ಕೊರತೆಯುಂಟಾಗಲಾರದು]೨೪) ಪೂರ್ವಾಭಾದ್ರಪದ ನಕ್ಷತ್ರದಲ್ಲಿ ಪೂರ್ವಾಭಿಮುಖವಾಗಿ ಶ್ವೇತಬೇರನ್ನು ತಂದು ನೀರಿನೊಡನೆ ಹೊಟ್ಟೆಯಲ್ಲಿ ಕೊಡಲು ನೇತ್ರರೋಗವು ವಾಸಿಯಾಗುವದು (೨೫] ಉತ್ತರಾ ಭಾದ್ರಪದನಕ್ಷತ್ರದಲ್ಲಿ ಕಣಗಿಲಮೂಲವನ್ನು ಪೂರ್ವಾಭಿಮುಖವಾಗಿ ತೆಗೆದು ನೀರಿನಲ್ಲಿ ತೆಯಿದು ಅದರ ಲೇಪವನ್ನು ಚಟ್ಟೆಗಳಿಗೆ ಹಚ್ಚಲು ವಾಸಿಯಾಗುವವು [೨೬) ರೇವತೀ ನಕ್ಷತ್ರದಲ್ಲಿ ಪೂರ್ವಾಭಿಮುಖವಾಗಿ ಅಜವಾನಗಿಡದ ಬೇರನ್ನು ತಂದು ಅವರಕಾಡೆಯನ್ನು [ಕಷಾಯ) ಕೊಡಲು ಸ್ವಾಶವು ದೂರಾಗುವದು (೨೭] ಪುಷ್ಯಾರ್ಕದಲ್ಲಿ ವಟವಟಿಯ ಬೇರನ್ನು ತಂದು ಮನೆಯಲ್ಲಿಡಲು ಸರ್ಪಗಳು ಅಲ್ಲಿ ನಿಲ್ಲಲಾರವು (೨೮) ಶನಿವಾರ ಮಹಾಳಿಂಗದ ಗಿಡಕ್ಕೆ ಕಾರ್ಯಕ್ಕೆಬರಬೇಕೆಂದು, ಅಕ್ಷತೆಯನ್ನು ಹಾಕಿ, ರವಿವಾರದಲ್ಲಿ ಅವರ ಬೇರನ್ನು ತಂದುಮೇಲೆ ಅಂತರದಲ್ಲಿಯೇ ಇಡಬೇಕು. ಪ್ರಸೂತಿ ಸಮಯದಲ್ಲಿ ಸ್ತ್ರೀಯರ ಟೊಂಕಕ್ಕೆ ಕಟ್ಟಲು ಸತ್ವರ ಪ್ರಸೂತಿಯಾಗುವದು. ಆಮೇಲೆ ಬೇಗನೆ ಅದನ್ನು ಬಿಚ್ಚಿ ತೆಗೆಯಬೇಕು. (೨೯) ಅಶ್ವಿನೀ ನಕ್ಷತ್ರದಲ್ಲಿ ಕೇರಿನಗಿಡದ ಹಸೇಕಾಯಿಯನ್ನು ತಿನ್ನಲು, ಹದಿನೆಂಟು ಪ್ರಕಾರದ ಕುಷ್ಟಗಳು ವಾಸಿಯಾಗುವವು.

ತಂತ್ರಪ್ರಕರಣ ಸಮಾಪ್ತ.



ಅಥ ಸ್ತಂಭನ ಮಂತ್ರ.

ಮಂತ್ರ ॥ ಓಂ ಸ್ಫುರ ಸ್ಫುರ ಪ್ರಸ್ಫುರ ಘೋರ ಘೋರ ತರತರ ತನುರೂಪ ತನುರೂಪ ಚಟಚಟ ಪ್ರಚಟು ಕಹಕಹ । ವಮವಮ ಬಂಧಬಂಧ ಹುಂಕಾಮ ಹುಂಕಾಮ ಅಹೋರಾತ್ರಿ ಸಾಯಂಘಟು ಸ್ವಾಹಾ ॥ ಈ ಮಂತ್ರವನ್ನು ಹಿಂದೆ ಹೇಳಿದ ಪ್ರಕಾರ ಸಿದ್ಧಿ ಮಾಡಿಕೊಂಡು ಸರ್ವಸಿದ್ಧಿ ವಶ್ಯಕ್ಕೆ ೧೦೮ ಸಾರಿ, ಸ್ತಂಭನಕ್ಕೆ ೧೮೧ ಸಾರಿ, ಆಕರ್ಷಣಕ್ಕೆ ೧೮೯ ಸಾರಿ, ಮಾರಣಕ್ಕೆ ೯೯ ಸಾರಿ, ಕ್ಷಯಕ್ಕೆ ೧೦ ಸಾರಿ, ಸರ್ವ ಶೂಲೆಗಳಿಗೆ ೯ ಸಾರಿ, ಸರ್ವಗ್ರಹ ನಿವಾರಣೆಗೆ ೯೦ ಸಾರಿ, ವೈರಿಸ್ತಂಭನಕ್ಕೆ ೯೩ ಸಾರಿ, ಸರ್ಪ ಕಚ್ಚಿದವರಿಗೆ ೯೫ ಸಾರಿ ಮಂತ್ರಿಸಿದರೆ ಸಿದ್ಧಿಯಾಗುವದು.

ಅಥ ಚೋರರನ್ನು ಹಿಡಿಯುವ ಮಂತ್ರ.

ಓಂ ॥ ನಮೋ ಭಗವತಿ ಜ್ವಾಲಮಾಲಿನೀಯು ಪರದೇವಿ ನಮಸ್ತೇ ಸರ್ವ ಭೂತದೇವಿ ನಮಸ್ತೇ ಸ್ವಾಹಾ ॥ ಈ ಮಂತ್ರದಿಂದ ಅವರವರ ಹೆಸರನ್ನು ಚೀಟಿಯಲ್ಲಿ ಬರೆದು ಎಣ್ಣೆಯಲ್ಲಿ ಎದ್ದಿ ಅಗ್ನಿಯನ್ನು ಪೂಜಿಸಿ ೩ ಸಾರಿ ಮಂತ್ರಿಸಿ ಆ ಬೆಂಕಿಯಲ್ಲಿ ಆ ಚೀಟಿಯನ್ನು ಹಾಕಿದರೆ ಪದಾರ್ಥವನ್ನು ತೆಗೆದುಕೊಂಡವರ ಹೆಸರಿನ ಚೀಟಿಯು ಸುಡುವದಿಲ್ಲ. ಅವರೇ ಕದ್ದವರೆಂದು ತಿಳಿಯಬೇಕು. ಈ ಮಂತ್ರವನ್ನು ಹಿಂದೆ ಹೇಳಿದ ಪ್ರಕಾರ ಸಿದ್ಧಿಯನ್ನು ಮಾಡಿಕೊಳ್ಳಬೇಕು.

ಭೂಮಿಯಲ್ಲಿ ಕ್ರಿಮಿಕೀಟ ಮೃಗಪಕ್ಷಿಗಳ ಕಟ್ಟಿನ ಮಂತ್ರ

ಮಂತ್ರ ॥ ಓಂ ನಮೋ ಭಗವತೇ ನೀಯತೇ ಗುಂಹ್ಯತೇ ಸಿನೇಪಸ್ವಾಹಾ॥ ಈ ಮಂತ್ರದಿಂದ ಕುಂಬಾರನ ಮನೆಯ ಆವಿಗೆಯ ಬೂದಿ, ಕಮ್ಮಾರನ ಕುಲಿಮೆಯ ಬೂದಿ, ಬಾರಿಕರ ಮನೆಯ ಬೂದಿ, ಅಗಸರು ಬಟ್ಟೆಗಳನ್ನು ಉಬ್ಬೆ ಹಾಕುವ ಒಲೆಯ ಬೂದಿ. ಅಕ್ಕಸಾಲಿಗರ ಅಗ್ಗಿಷ್ಟಿಕೆಯಲ್ಲಿರುವ ಬೂದಿ ತಂದು ೩೧ ಸಾರಿ ಮಂತ್ರಿಸಿ ಹೊಲದ ಸುತ್ತಲೂ ಮಧ್ಯದಲ್ಲೂ ಹಾಕಲು ಕ್ರಿಮಿಕೀಟ ಮೃಗಪಕ್ಷಿಗಳು ಬೆಳೆಯನ್ನು ಮುಟ್ಟುವದಿಲ್ಲ. ಈ ಕ್ರಮವನ್ನು ಆದಿತ್ಯವಾರ ಗುರುವಾರ ಮಾಡತಕ್ಕದ್ದು.

ಮತ್ತೊಂದು ವಿಧ.

ಮಂತ್ರ ॥ ಓಂ ಅಮೃತ ಕಾಳಿಸ್ವಾಹಾ ॥ ಈ ಮಂತ್ರದಿಂದ ಹಳ್ಳದಲ್ಲಾಗಲಿ ಹೊಳೆಯಲ್ಲಾಗಲಿ ಜಿನುಗು ಇರತಕ್ಕ ಮಳಲನ್ನು ತಂದು ಅದರಲ್ಲಿ ಸ್ವಲ್ಪ ಬಿಳಿ ಸಾಸುವೆಯನ್ನು ಕಲಸಿ ಪೂಜಿಸಿ ೩೧ ಸಾರಿ ಮಂತ್ರಿಸಿ ಹೊಲದ ಸುತ್ತಲೂ ಮಧ್ಯದಲ್ಲೂ ಹಾಕಲು ಮೂಷಕ, ವಿಕ ಮುಂತಾದ ಮೃಗಪಕ್ಷಿ ಕ್ರಿಮಿಕೀಟಕಗಳು ಬೆಳೆಯನ್ನು ಮುಟ್ಟುವದಿಲ್ಲ. ಈ ಕ್ರಮವನ್ನು ಗುರುವಾರ ಭಾನುವಾರ ಮಾಡತಕ್ಕದ್ದು. ಈ ಮಂತ್ರಗಳನ್ನು ಹಿಂದೆ ಹೇಳಿದ ಪ್ರಕಾರ ಸಿದ್ಧಿಯನ್ನು ಮಾಡಿಕೊಳ್ಳಬೇಕು.

ಅಥ ಕ್ಷುದ್ರ ಭೂತ ವಿದ್ಯಾ ಪ್ರಾರಂಭಃ.

ತ್ವರಿತಾಮಂತ್ರ ಸಾಧನ.

ಆಗ್ನೇಯ ಪುರಾಣದಲ್ಲಿ :—

ಶ್ಲೋ ॥ ಈಶಃಕಿರಾತರೂಪೋ ಭೂತ್ಪುರಾಗೌರೀಚತಾದೃಶೀ ।
ಜಪೇದ್ವಾ ಯೋತ್ಪೂಜಯೇತ್ತಾಂ ಸರ್ವಸಿದ್ಧ್ಯೈವಿಷಾದಿನುತ್ ॥

ತಾತ್ಪರ್ಯ—ತ್ವರಿತಾ ಮಂತ್ರವೆಂದರೆ—ದ್ವಾಪರಯುಗದಲ್ಲಿ ಈಶ್ವರನು ಕಿರಾತನ (ಬೇಡರ) ವೇಷವನ್ನು ಧರಿಸಿಕೊಂಡು ದಂಡಕಾರಣ್ಯದೊಳಗೆ ಸಂಚಾರ ವನ್ನು ಮಾಡುತ್ತಿದ್ದನು. ಕೂಡಲೆ ತನ್ನ ಅರ್ಧಾಂಗಿಯಳಾದ ಪಾರ್ವತಿಯು ಈ ವಾರ್ತೆಯಂ ಕೇಳಿ ಕೈಲಾಸದಿಂದ ತಾನೂ ಕಿರಾತ ವೇಷವನ್ನು ಧರಿಸಿಕೊಂಡು ಪರಮೇಶ್ವರನ ಹತ್ತಿರ ಬರುವಾಗ ಮಹಾಜ್ಞಾನಿಗಳಾದ ಋಷೀಶ್ವರರೆಲ್ಲರೂ ಈ ಕಿರಾತ ರೂಪವಂ ತಾಳಿದ ಪಾರ್ವತಿಯನ್ನು ಅನೇಕ ವಿಧವಾಗಿ ಸ್ತೋತ್ರ ಮಾಡುತ್ತ "ಪಾರ್ವತಾದೇವಿಯು ಶೀಘ್ರ (ತ್ವರಿತ) ಗಮನದಿಂದ ನಡೆಯುತ್ತಿದ್ದದ್ದರಿಂದ ಈ ದೇವಿಗೆ 'ತ್ವರಿತಾದೇವಿ' ಎಂಬ ಹೆಸರನ್ನಿಟ್ಟು ಸ್ತುತಿಸಿದರು. ಈ ಪಾರ್ವತಾದೇವಿಯೇ ತ್ವರಿತಾದೇವಿ" ಎಂದು ತಿಳಿಯಬೇಕು.

ಮಂತ್ರ ॥ ಓಂ ಆಧಾರಶಕ್ತ್ಯೈ ನಮಃ । ಓಂ ಹ್ರೀಂ ಪುರುಪುರು ಮಹಾ ಸಿಂಹಾಯನಮಃ । ಓಂ ಪದ್ಮಾಯನಮಃ । ಓಂ ಹ್ರೀಂ ಹ್ರೂಂ ಖೇಚಛೇಕ್ಷಃ ಸ್ತ್ರೀಓಂಹ್ರೂಂಕ್ಷೈಂಹ್ರೂಂ ಫಟ್ ತ್ವರಿತಾಯ್ಯೆನಮಃ । ಖೇಚಹೃದಯಾನಮಃ । ಚಚ್ಛೇ ಸಿರಸೇ ಸ್ವಾಹಾ । ಛೇಕ್ಷಶಿಖಾಯ್ಯೆವೌಷಟ್ । ಕ್ಷಸ್ತ್ರೀಕವಚಾಯಹುಂ ಸ್ತ್ರೀಂ ಹ್ರೂಂ ನೇತ್ರಾಯನಮಃ । ಹ್ರೂಂ ಫೇ ಅಸ್ತ್ರಾಯ ಫಟ್ । ಓಂ ತ್ವರಿತಾ ವಿದ್ಯಾ ವಿದ್ಮಹೇತೂರ್ಣ ವಿದ್ಯಾಂಪಧೀಮಹಿ । ತನ್ನೋದೇವೀ ಪ್ರಚೋದಯಾತ್ ॥

ಈ ಮಂತ್ರ ಗ್ರಹಣಕಾಲದಲ್ಲಿ ಸಾಧಕನು ಪ್ರಾತಃಕಾಲದಲ್ಲಿ ಸ್ನಾನಾದಿಗಳನ್ನು ಮಾಡಿ ಶುಚಿರ್ಭೂತನಾಗಿ ನದೀ ಪ್ರದೇಶಕ್ಕಾಗಲಿ ಕೆರೆಗಾಗಲಿ ಹೋಗಿ ಅಲ್ಲಿರುವ ಮರುಳಿನಿಂದ ಈ ತ್ವರಿತಾರೂಪವಾಗಿ ಒಂದು ಗೊಂಬೆಯನ್ನು ಮಾಡಿ ಅದಕ್ಕೆ ಷೋಡಶೋಪಚಾರಗಳಿಂದ ಪೂಜಾದಿಗಳನ್ನು ಮಾಡಿ ಹಾಲು, ತುಪ್ಪ ಬೆಲ್ಲ, ಕಲಸಿದ ಅನ್ನವನ್ನು ನೈವೇದ್ಯವನ್ನು ಕೊಟ್ಟನಂತರ ಈ ಜಪವನ್ನು ಗ್ರಹಣ ಹಿಡಿದದ್ದು ಮೊದಲಿನಂತೆ ಬದ್ಧಮಂಡಲವಾಗುವವರೆಗೂ ಜಪವನ್ನು ಮೌನವ್ರತದಿಂದ ತದೇಕನಿಷ್ಠನಾಗಿ ಮಾಡಿ ಅನಂತರ ಈ ಕೆಳಗೆ ಬರೆದ ಸಾಮಗ್ರಿಯಿಂದ ಹೋಮವನ್ನು ಮಾಡಬೇಕು.

ಮತ್ತೊಂದು ವಿಧ.

ಓಂ ॥ ನಮೋ ಭಗವತೀ ಕೋಂಡೇರು ಯೇರು ಗಡುಗಡು ಕರುಕರು ಎಣ್ಣಾಕ ಎನ್ನ ಗುರುವಿನ ಆಣೆ ಓಂ ಫಟ್ ಸ್ವಾಹಾ ॥ ಈ ಮಂತ್ರವನ್ನು ಹಿಂದೆ ಹೇಳಿದ ಪ್ರಕಾರ ಸಿದ್ಧಿ ಮಾಡಿಕೊಂಡು ಚೇಳು ಕಚ್ಚಿದ ಸ್ಥಳ ಮಂತ್ರಿಸಲು ಸಿದ್ಧಿ ಆಗಿ ತತ್‌ಕ್ಷಣವೇ ಇಳಿಯುವದು.

ಕರಿ ನೂಲಿನ ಮಂತ್ರ.

ಶ್ರೀಗುರುವೆ ಕಾಡುಸಿದ್ಧೇಶ್ವರ ನಿನ್ನ ಪಾದವೇ ಗತಿ. ಭೂತಪ್ರೇತ ಪಿಶಾಚಿ ದಯುಭಿಂದಿಭಿಂದಿ ಶಾಕಿನೀ ಡಾಕಿನೀ ಬ್ರಹ್ಮರಾಕ್ಷಸ ದಯುಭಿಂದಿಭಿಂದಿ ಹೆಚ್ಚಿ ಣಿಯು ಮರಿತ ಬೇತಾಳ ದಯುಭಿಂದಿಭಿಂದಿ ಸರ್ವಸಾಕಿ ಸರ್ವಸಾ ॥ ಕರಿನೂಲು ೯ ಎಳೆ ತೋಡಿ ೯ ಗಂಟು ಹಾಕಿ ೯ ಸಾರಿ ಮಂತ್ರಿಸಿ ಕಟ್ಟಿದರೆ ಚಳುಕು ತಲೆಶೂಲಿ ಹೊಟ್ಟೆಬೇನೆ, ಕಣ್ಣುಬೇನೆ, ಮಕ್ಕಳು ಹೆದರಿ ಚೀರಿವರೂ ನಿವಾರಣೆಯಾಗುತ್ತವೆ ಈ ಮಂತ್ರವನ್ನು ಹಿಂದೆ ಹೇಳಿದ ಪ್ರಕಾರ ಸಿದ್ಧಿ ಮಾಡಿಕೊಳ್ಳಬೇಕು.

ವಿಭೂತಿ ಮಂತ್ರ.


ಓಂ ॥ ನಮೋ ಭಗವತೀ ಪಾರ್ರಿಸ್ವಾಹಾ ಚಂದ್ರಚಂದ್ರಯು ವಿಹಿ ವಿಹಿ ದಹ ದಹ ಪಚಪಚ ಘರ್ನಾಯು ಘರ್ನಾಯ ಬಂಜ ಬಂಜ ಖಡ ಖಡ ಮರ್ದಯು ಮರ್ದಯ ಆವೇಶಯಾವೇಸಯಹುಂ ಫಟ್ ಸ್ವಾಹಾ ॥ ಈ ಮಂತ್ರವನ್ನು ೨೭ ಸಾರಿ ವಿಭೂತಿಯಿಂದ ಮಂತ್ರಿಸಿ ಮೇಲಿನಿಂದ ಕೆಳಕ್ಕೆ ಹಚ್ಚಲು ಮಾಟವನ್ನು ಯಾರಾದರೂ ಮಾಡಿದ್ದರೂ ಜನರ ದೃಷ್ಟಿದೋಷದಿಂದ ಯಾವ ಕೆಲಸಗಳಾಗಲಿ ಕೆಟ್ಟಿದ್ದರೂ ತತ್‌ಕ್ಷಣವೇ ಆ ದೋಷಗಳು ಹೋಗುತ್ತವೆ. ಮತ್ತು ಈ ಮಂತ್ರ ದಿಂದಲೇ ಔಡಲ ಎಣ್ಣೆ ಮಂತ್ರಿಸಿ ಸ್ವಲ್ಪ ಕುಡಿಸಲು ನವಮಾಸ ತುಂಬಿ ಪ್ರಸವ ವೇದನಪಡುತ್ತಿರುವ ಗರ್ಭಿಣೀ ಸ್ತ್ರೀಯರು ತತ್‌ಕ್ಷಣವೇ ಪ್ರಸವವಾಗುವರು.

ಗಾಯವಾದರೆ ಎಣ್ಣೆಯ ಅರಿವೆಯನ್ನು ಮಂತ್ರಿಸಿ ಕಟ್ಟಿದರೆ ಶಾಂತಿಯಾಗು ವದು. ಇದನ್ನು ಹಿಂದೆ ಹೇಳಿದ ಪ್ರಕಾರ ಸಿದ್ಧಿಯನ್ನು ಮಾಡಿಕೊಳ್ಳಬೇಕು.

ಮಕ್ಕಳ ದೃಷ್ಟಿ ಮಂತ್ರ.

ಓಂ ॥ ನಮೋ ಭಗವತಿ ಸಂಚಳ ಕ್ರಿ ಹ್ರೀ ಹ್ರಾಂ ಹ್ರೋಂ ರಾಕ್ಷಸ ಫಟು ಸ್ವಾಹಾ ॥ ಚಲೋ ಚಲೋ ಜಾವೆ ಜಾವೆ ಕಾಡುಕಾಂ ನೊಕುತು ಗುರಿಗೆ ಭಗ ವಂತೋ ಪುರೋಮಂತ್ರ ವಿಶ್ವತೋವಾಚ ॥ ಈ ಮಂತ್ರವನ್ನು ಮಕ್ಕಳಿಗೆ ದೃಷ್ಟಿ ಯಾಗಿ ಕರೆಕರೆ ಮಾಡುತ್ತಿರಲು ಮೂರು ಸಾರಿ ಮಂತ್ರಿಸಿದರೆ ಆ ದೃಷ್ಟಿದೋಷ ಹೋಗುವದು ಮತ್ತು ದೊಡ್ಡವರಿಗೆ ಊಟ ಮಾಡುವ ಕಾಲದಲ್ಲಿ ಕಾಲುಭೂ ಯಾಗಿದ್ದರೆ ಉಪ್ಪು ಆಗಲಿ ಬೆಳ್ಳುಳ್ಳಿಯಾಗಲಿ ಮಂತ್ರಿಸಿ ತಿನ್ನಲಿಕ್ಕಾಗಲಿ ಊಟ ದಲ್ಲಿಯಾಗಲಿ ಉಪಯೋಗಿಸಿದರೆ ಪರಿಹಾರವಾಗುವದು.

ಮತ್ತೊಂದು ವಿಧ ಗ್ರಹೋಚ್ಚಾಟನೆಯ ಮಳಯಾಳ ಯಂತ್ರ



ಈ ಯಂತ್ರದೊಳಗೆ ಭೂತದ ವಸ್ತುಗಳನ್ನು ಹಾಕಿ ಕಟ್ಟುವದು. ಮಂತ್ರವು—ಓಂ ಶ್ರೀ ಹನುಮಂತ ಬಂಧ ಬಂಧ ಹಿಡಿ ಹಿಡಿ ನೂಕು ನೂಕು [illegible] ಇರಿ ಕಡಿ ಕಡಿ ಮುರಿ ಮುರಿ ದಮು ದಮು ಹಿಡಿ ಹಿಡಿ ಚಟ ಚಟ ಹುಂ ಫಟ್ ಸ್ವಾಹಾ ಓಂ ಬಂದಾಲ ಗುರುಪ್ರಸಾದ ॥ ಈ ಮಂತ್ರವನ್ನು ಹಿಂದೆ ಹೇಳಿದ ಪ್ರಕಾರ ಸಿದ್ಧಿ ಮಾಡಿಕೊಂಡು ಕಟ್ಟುವದು.

ಅಥ ಭೂತೋಚ್ಚಾಟನಾಂಜನ.

ಬಿಳಿ ಸಾಸಿವೆ, ಕಿಟ್ಟಾ (ಅಡಿಗೆಯ ಮನೆಯ ಜಂತೆಗಳಿಗೆ ಹತ್ತಿರುವ ಕಪ್ಪು ಪದಾರ್ಥವು), ಶುಂಠಿ, ಹಿಪ್ಪಲಿ, ಬಜೆ, ಮೆಣಸು, ಇಂಗಳಾರದ ಮೇಣ ಈ ಸಾಮಾನುಗಳನ್ನು ಸಮನಾಗಿ ತೆಗೆದುಕೊಂಡು ಕಂಬಳಿಯಲ್ಲಿ ತೇದು ಗ್ರಹ ಹಿಡಿದವರ ಕಣ್ಣುಗಳಿಗೆ ಹಚ್ಚಲು ಭೂತಬಾಧೆ ನಿವಾರಣೆಯಾಗುತ್ತದೆ.

ಮತ್ತೊಂದು ವಿಧ.

ಕಸ್ತೂರಿ ಬೇರು, ಬಿಳಿಯ ಗರಜಿಗೆಯ ಬೇರು, ಜಾಪುಮೆಕ್ಕೆಯ ಬೀಜ, ಹುಳಗಲ ಬೀಜ, ಶುಂಠಿ, ಮೆಣಸು, ಹಿಪ್ಪಲಿ, ಇಂಗಳಾರದ ಮೇಣ ಇವುಗಳನ್ನು ಸಮನಾಗಿ ತೆಗೆದುಕೊಂಡು ಚೂರ್ಣವನ್ನು ಮಾಡಿ ನಿಂಬೆಯ ಹಣ್ಣಿನ [illegible] ಚೆನ್ನಾಗಿ ಅರೆದು ಕಡಲೆಯ ಕಾಳಿನ ಪ್ರಮಾಣ ಗುಳಿಗೆಗಳನ್ನು ಮಾಡಿ [illegible]

ಮತ್ತೊಂದು ವಿಧ ಭೂತೋಚ್ಚಾಟನೆಯ ಮಳೆನೂಲ ಯಂತ್ರ

ಶ್ವ	ಶ್ವ	ಶ್ವ	ಶ್ವ	ಶ್ವ	ಶ್ವ	ಶ್ವ	ಶ್ವ	ಶ್ವ
[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
ಲ	ಲ	ಲ	ಲ	ಲ	ಲ	ಲ	ಲ	ಲ
ರು	ರು	ರು	ರು	ರು	ರು	ರು	ರು	ರು
ಛ	ಛ	ಛ	ಛ	ಛ	ಛ	ಛ	ಛ	ಛ
[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]

ಈ ಯಂತ್ರದೊಳಗೆ ಭೂದೋಷ ವಸ್ತುಗಳನ್ನು ಹಾಕಿ ಕಟ್ಟುವದು. ಮಂತ್ರವು—ಓಂ ಶ್ರೀಂ ಹನುಮಂತ ಬಂಧ ಬಂಧ ನಡೆ ನಡೆ ನೂಕು ನೂಕು ಇ[illegible] ಇರಿ ಕಡಿ ಕಡಿ ಮುರಿ ಮುರಿ ದಮು ದಮು ಹಿಡಿ ಹಿಡಿ ಛಟ ಛಟ ಹುಂ ಫಟ್ ಸ್ವಾಹಾ ಓಂ ಬಂಟಾಲ ಗುರುಪ್ರಸಾದ ॥ ಈ ಮಂತ್ರವನ್ನು ಹಿಂದೆ ಹೇಳಿದ ಪ್ರಕಾರ ಸಿದ್ಧಿ ಮಾಡಿಕೊಂಡು ಕಟ್ಟುವದು.

ಅಥ ಭೂತೋಚ್ಚಾಟನಾಂಜನ.

ಬಿಳೆ ಸಾಸಿವೆ, ಕಿಟ್ಟದ (ಅಡಿಗೆಯ ಮನೆಯ ಜಂತೆಗಳಿಗೆ ಹತ್ತಿರುವ ಕಪ್ಪು ಪದಾರ್ಥವು), ಬಂಜೆ, ಹಿಪ್ಪಲಿ, ಬಜೆ, ಮೆಣಸು, ಇಂಗಳಾರದ ಮೇಣ ಈ ಸಾಮಾನುಗಳನ್ನು ಸಮನಾಗಿ ತೆಗೆದುಕೊಂಡು ಕಂಬಲಿಯಲ್ಲಿ ತೇದು ಗ್ರಹ ಹಿ[illegible]ದವರ ಕಣ್ಣುಗಳಿಗೆ ಹಚ್ಚಲು ಭೂತಬಾಧೆ ನಿವಾರಣೆಯಾಗುತ್ತದೆ.


ಮತ್ತೊಂದು ವಿಧ.

ಕಸ್ತೂರಿ ಬೇರು, ಬಿಳಿಯ ಗಣಜಲಿಯ ಬೇರು, ಹಾವುಮೆಕ್ಕೆಯ ಬೇ[illegible] ಹುಳಗಲ ಬೀಜ, ಬಂಜೆ, ಮೆಣಸು, ಹಿಪ್ಪಲಿ, ಇಂಗಳಾರದ ಮೇಣ ಇವುಗಳ[illegible] ಸಮನಾಗಿ ತೆಗೆದುಕೊಂಡು ಚೂರ್ಣವನ್ನು ಮಾಡಿ ನಿಂಬೆಯ ಹಣ್ಣಿನ ರಸ[illegible] ಚೆನ್ನಾಗಿ ಅರೆದು ಕಡಲೆಯ ಕಾಳಿನ ಪ್ರಮಾಣ ಗುಳಿಗೆಗಳನ್ನು ಮಾಡಿ [illegible]

೨ನೆಯ ವಿಧ ಮಂತ್ರವು.

ಓಂ ನಮೋ ಭಗವತೀ ಹ್ರೀಂ ಕಾರಿ ಸಗುಣಿ ನಿರ್ಗುಣಿ ನಿಜನಂದಿ ಪರಮ ನಂದಿ ಸರ್ವೇಶ್ವರಿ ಪ್ರಾಣನಾಯಕಿ ಕಿಲಕಿಲಿ ಕಹಕಹ ಓಂ ಹ್ರೀಂ ಸ್ವಾಹಾ ||
ಈ ಎರಡು ಮಂತ್ರಗಳಲ್ಲಿ ಯಾವದಾದರೊಂದನ್ನ ಉಪಯೋಗಿಸಿಕೊಳ್ಳಬಹುದು

ಭೂತಪ್ರೇತಪಿಶಾಚಾಗಳ ಗಾಳಿಸೋಂಕು ಗ್ರಹ (ದೆವ್ವ) ಗಳನ್ನ ಬಿಡಿಸುವ ಯಂತ್ರ ಮಂತ್ರ ಕ್ರಮವು.



ಅಥಮಂತ್ರ ಕ್ರಮ:—ಓಂ ನಮೋ ಭಗವತೀ ರುದ್ರರೂಪಿಣಿ ದುರ್ಗಿ ಚಾಮುಂಡಿ ಭೈರವಿ ಕಾಳಿ ಕರಾಳಿ ಮಹಾಕಾಳಿ ಭೂತದಾರಿಣಿ ಉಗ್ರಭೂತ ವಡ ಚಾನಾಳಿ ಕ್ರೂರಭೂತ ಭಯಂಕರೀ ದುಷ್ಟಭೂತ ಮಸ್ತಕಶೂಲಿನಿ ಭೇತಾಳ ಬ್ರಹ್ಮರಾಕ್ಷಸಧಳಿನಿ ಹ್ರೀಂ ಸ್ಫುರ ಸ್ಫುರ ಸ್ಫುರ ಸ್ಫುರ ಛಟ ಛಟ ಛಟ ಛಟ ಆವೇಶಯಾವೇಶಯ ಸ್ವಾಹಾ ||

ಈ ಮಂತ್ರವನ್ನು ೧೦೮ ಸಾರಿ ಜಪಿಸಿ ಹಿಂದೆ ಹೇಳಿದ ಪ್ರಕಾರ ಸಿದ್ಧಿಯನ್ನು ಮಾಡಿಕೊಂಡಿದ್ದು ಸಾಧಕನು ಭೂತಾದಿಗಳನ್ನು ಬಿಡಿಸುವದು ಹೇಗೆಂದರೆ:— ಪ್ರಥಮದಲ್ಲಿ ಗ್ರಹ ಹಿಡಿದವರೆದುರಿಗೆ ಕುಳಿತುಕೊಂಡು ಈ ಮಂತ್ರವನ್ನು ೧೧ ಸಾರಿ ಜಪಿಸಿ ಈ ಯಂತ್ರವನ್ನು ಬಾಳೆಯ ಎಲೆಯ ಒಳಗಾಗಲಿ, ತಾಮ್ರದ ತಗಡಿನ ಒಳಗಾಗಲಿ ಬರೆದು ಎಲೆಯಾಪರೆ ಗ್ರಹ ಹಿಡಿದವರ ಮುಖವನ್ನು ಮುಚ್ಚಿ

ಈ ಮಂತ್ರವನ್ನು ಹಿಂದೆ ತ್ವರಿತಾಮಂತ್ರದಂತೆ ಸಿದ್ಧಿಯನ್ನು ಮಾಡಿಕೊಂಡರೆ "ಮಹಾಮಾರೀ ವಿಷೂಚೀ" ಎಂಬ ಕ್ಷುದ್ರಗ್ರಹರೂಪವಾದ ತೊಂದರೆಗಳು ತಗಲುವದಿಲ್ಲ. ಹೇಗೆಂದರೆ—ಈ ಮಂತ್ರವನ್ನು ಒಂದು ಪಂಚಲೋಹದ ತಗಡಿನಲ್ಲಿ ಬರೆದು ಆದಿತ್ಯವಾರ ದಿವಸ ಶುಚಿರ್ಭೂತನಾಗಿ ಈ ಯಂತ್ರವನ್ನು ಆಕಳ ಹಾಲಿನಲ್ಲಿ ಹಾಕಿ ೧೦೮ ಸಾರಿ ಅಭಿಮಂತ್ರಿಸಿ ಆ ಹಾಲಿನಿಂದ ತೆಗೆದುಕೊಂಡು ಬಂದು ದೇವಸ್ಥಾನದಲ್ಲಿಯಾಗಲಿ ಯಾವ ವಿಧವಾದ ಮೈಲಿಗೆ ಸಂಬಂಧವಿಲ್ಲದ ಪರಿಶುದ್ಧವಾದ ಮನೆಯಲ್ಲಾಗಲಿ ಸ್ಥಾಪಿಸಿ ಪೂಜಾಸಾಮಗ್ರಿಗಳನ್ನು ತೆಗೆದುಕೊಂಡು ಹೋಗಿ ಮಂಗಳವಾದ್ಯ ಸಹಿತವಾಗಿ ಷೋಡಶೋಪಚಾರಗಳಿಂದ ಪೂಜಾದಿಗಳನ್ನು ಮಾಡಿ ಈ ಯಂತ್ರವನ್ನು ಗ್ರಾಮದ ಪ್ರತಿಯೊಂದು ಕೇರಿಯಲ್ಲಿಯೂ ಉತ್ಸವದಿಂದ ಮೆರವಣಿಗೆಯನ್ನು ಮಾಡಿ ಪುನಃ ಆ ದೇವಸ್ಥಾನದಲ್ಲಿಯಾಗಲಿ ಆ ಮನೆಯಲ್ಲಾಗಲಿ ಸ್ಥಾಪಿಸಿ ಆ ದಿನ ಮೊದಲು ೪೦ ದಿವಸವು ಇದೇ ಪ್ರಕಾರ ಪೂಜಾದಿಗಳನ್ನು ಮಾಡುತ್ತ ಬರಲು ಮಹಾಮಾರಿ ವಿಷೂಚಿ ಮುಂತಾದ ಭಯವು ಆ ಊರಿಗೆ ಬರುವದಿಲ್ಲ. ಮತ್ತು ಈ ಮಂತ್ರಸಿದ್ಧಿಯನ್ನು ಮಾಡಿಕೊಂಡವರು ಬ್ರಹ್ಮದಂಡಿಗಿಡದ ಸಮೂಲ ಚೂರ್ಣವನ್ನು ಆ ಗಿಡದ ಹಾಲಿನಲ್ಲಿ ಕಲಸಿ ಮೈಯ್ಯಲ್ಲಿ ಹಚ್ಚಿಕೊಂಡು ಈ ಮಂತ್ರವನ್ನು ಜಪಿಸುತ್ತ ನೀರಿನಲ್ಲಿ ತನಗೆ ಬೇಕಾದಷ್ಟು ಹೊತ್ತು ಕುಳಿತುಕೊಳ್ಳಲು ನೀರಿನ ಬಾಧೆ ಆಗುವದಿಲ್ಲ. ಮತ್ತು ಈ ಮಂತ್ರವನ್ನು ಜಪಿಸುತ್ತ ಅಂಗಾಲಿಗೆ ಹಚ್ಚಿಕೊಂಡು ಕೆಂಡದ ಮೇಲೆ ನಡೆಯುತ್ತ ಇದ್ದರೂ ಬೆಂಕಿಯ ಭಯವಿಲ್ಲ. ಇದಕ್ಕೆ ಜಲಸ್ತಂಭನವೆಂತಲೂ ಅಗ್ನಿಸ್ತಂಭನವೆಂತಲೂ ಹೇಳುವರು. ಈ ಮಂತ್ರಪ್ರಭಾವದಿಂದ ಅಗ್ನಿಕಣಗಳನ್ನು ಕೈಗಳಿಂದ ಹಿಡಿದರೂ ಭಯವಿಲ್ಲವೆಂದು ತಿಳಿಯಬೇಕು.

ವಿದ್ಯಾತಂತ್ರ ಭೂತಮೋಡಿ ವಿದ್ಯೆ.

ಶ್ರೀರಸ್ತು.

ಭಾನುವಾರದ ದಿವಸ ಭರಣಿ, ರೇವತಿ, ವಿಶಾಖ, ರೋಹಿಣಿ, ಮೃಗಶಿರ ನಕ್ಷತ್ರಗಳೊಳಗೆ ಒಂದು ನಕ್ಷತ್ರ ಬಂದ ದಿವಸ ಸ್ನಾನ ಮಾಡಿ ಶುಚಿರ್ಭೂತನಾಗಿ ಸಾಧಕನು ಪೂಜಾಸಾಮಗ್ರಿಗಳನ್ನು ತೆಗೆದುಕೊಂಡು ಮರ್ಕಟೀ (ನಸುಗುನ್ನಿ) ಗಿಡದ ಹತ್ತರ ಹೋಗಿ ಆ ಗಿಡಕ್ಕೆ ಅಷ್ಟವಿಧಾರ್ಚನೆಯಿಂದ ಪೂಜೆಯನ್ನು ಮಾಡಿ ದಕ್ಷಿಣಮುಖವಾಗಿ ಕುಳಿತುಕೊಂಡು ಈ ಕೆಳಗೆ ಬರೆದ ಮಂತ್ರವನ್ನು ೧೦೮ ಸಾರೆ ಏಕಮನಸ್ಸಿನಿಂದ ಮಂತ್ರಿಸಿ ಆ ಗಿಡದ ಬೇರನ್ನು ತೆಗೆದುಕೊಳ್ಳಬೇಕು. ಮಂತ್ರ: ಓಂ ಕಾಳಿ ನಿರ್ಮಲಿ ನಿದ್ಧೂತಿ ಭೈರವಿ ಕೋದಂಡವನ ಮೂಲಿಕೆ ಸಹರಾಗಿ ಸಾ... ಸ್ವಾಹಾ ॥ ಈ ಮಂತ್ರದಿಂದ ಬೇರನ್ನು ಕಿತ್ತು ಮೌನದಿಂದ ತೆಗೆದುಕೊಂಡು ಬಂದು ಯಾರೂ ಮುಟ್ಟದ ಸ್ಥಳದಲ್ಲಿ ಮನೆಯ ದೇವರ ಜಗುಲಿಯಲ್ಲಿಡುವದು.

ಅಥ ಸ್ತಂಭನ ಮಂತ್ರ.

ಮಂತ್ರ ॥ ಓಂ ಸ್ಫುರ ಸ್ಫುರ ಪ್ರಸ್ಫುರ ಘೋರ ಘೋರ ತರತರ ತನುರೂಪ ತನುರೂಪ ಚಟಚಟ ಪ್ರಚಟು ಕಹಕಹ । ವಮವಮ ಬಂಧಬಂಧ ಹುಕಾಮ ಹುಕಾಮ ಅಹೋರಾತ್ರಿ ಸಾಯಂಘಟು ಸ್ವಾಹಾ ॥ ಈ ಮಂತ್ರವನ್ನು ಹಿಂದೆ ಹೇಳಿದ ಪ್ರಕಾರ ಸಿದ್ಧಿ ಮಾಡಿಕೊಂಡು ಸರ್ವಸಿದ್ಧಿ ವಶ್ಯಕ್ಕೆ ೧೮೮ ಸಾರಿ, ಸ್ತಂಭನಕ್ಕೆ ೧೮೧ ಸಾರಿ, ಆಕರ್ಷಣಕ್ಕೆ ೧೮೪ ಸಾರಿ, ಮಾರಣಕ್ಕೆ ೯೯ ಸಾರಿ, ಕ್ಷಯಕ್ಕೆ ೧೦ ಸಾರಿ, ಸರ್ವ ಶೂಲೆಗಳಿಗೆ ೯ ಸಾರಿ, ಸರ್ವಗ್ರಹ ನಿವಾರಣೆಗೆ ೯೦ ಸಾರಿ, ವೈರಿಸ್ತಂಭನಕ್ಕೆ ೯೩ ಸಾರಿ. ಸರ್ಪ ಕಚ್ಚಿದವರಿಗೆ ೯೫ ಸಾರಿ ಮಂತ್ರಿಸಿದರೆ ಸಿದ್ಧಿಯಾಗುವದು.

ಅಥ ಚೋರನನ್ನು ಹಿಡಿಯುವ ಮಂತ್ರ.

ಓಂ ॥ ನಮೋ ಭಗವತಿ ಜ್ವಾಲಮಾಲಿನೀಯ ಪರದೇವಿ ನಮಸ್ತೇ ಸರ್ವ ಭೂತದೇವಿ ನಮಸ್ತೇ ಸ್ವಾಹಾ ॥ ಈ ಮಂತ್ರದಿಂದ ಅವರವರ ಹೆಸರನ್ನು ಚೀಟಿಯಲ್ಲಿ ಬರೆದು ಎಣ್ಣೆಯಲ್ಲಿ ಎದ್ದಿ ಅಗ್ನಿಯನ್ನು ಪೂಜಿಸಿ ೩ ಸಾರಿ ಮಂತ್ರಿಸಿ ಆ ಬೆಂಕಿಯಲ್ಲಿ ಆ ಚೀಟಿಯನ್ನು ಹಾಕಿದರೆ ಪದಾರ್ಥವನ್ನು ತೆಗೆದುಕೊಂಡವರ ಹೆಸರಿನ ಚೀಟಿಯು ಸುಡುವದಿಲ್ಲ. ಅವರೇ ಕದ್ದವರೆಂದು ತಿಳಿಯಬೇಕು. ಈ ಮಂತ್ರವನ್ನು ಹಿಂದೆ ಹೇಳಿದ ಪ್ರಕಾರ ಸಿದ್ಧಿಯನ್ನು ಮಾಡಿಕೊಳ್ಳಬೇಕು.

ಭೂಮಿಯಲ್ಲಿ ಕ್ರಿಮಿಕೀಟ ಮೃಗಪಕ್ಷಿಗಳ ಕಟ್ಟಿನ ಮಂತ್ರ

ಮಂತ್ರ ॥ ಓಂ ನಮೋ ಭಗವತೇ ನೀಯತೇ ಗುಂಹ್ಯತೇ ಸಂನ್ನೇಪಸ್ವಾಹಾ॥ ಈ ಮಂತ್ರದಿಂದ ಕುಂಬಾರನ ಮನೆಯ ಆವಿಗೆಯ ಬೂದಿ, ಕಮ್ಮಾರನ ಕುಲುಮೆಯ ಬೂದಿ, ಬಾರಿಕರ ಮನೆಯ ಬೂದಿ, ಅಗಸರು ಬಟ್ಟೆಗಳನ್ನು ಉಬ್ಬೆ ಹಾಕುವ ಒಲೆಯ ಬೂದಿ, ಅಕ್ಕಸಾಲಿಗರ ಅಗ್ಗಿಷ್ಟಿಕೆಯಲ್ಲಿರುವ ಬೂದಿ ತಂದು ೨೧ ಸಾರಿ ಮಂತ್ರಿಸಿ ಹೊಲದ ಸುತ್ತಲೂ ಮಧ್ಯದಲ್ಲೂ ಹಾಕಲು ಕ್ರಿಮಿಕೀಟ ಮೃಗಪಕ್ಷಿಗಳು ಬೆಳೆಯನ್ನು ಮುಟ್ಟುವದಿಲ್ಲ. ಈ ಕ್ರಮವನ್ನು ಆದಿತ್ಯವಾರ ಗುರುವಾರ ಮಾಡತಕ್ಕದ್ದು.

ಮತ್ತೊಂದು ವಿಧ.

ಮಂತ್ರ ॥ ಓಂ ಅಮೃತ ಕಾಳಿಸ್ವಾಹಾ ॥ ಈ ಮಂತ್ರದಿಂದ ಹಳ್ಳದಲ್ಲಾಗಲಿ ಹೊಳೆಯಲ್ಲಾಗಲಿ ಜಿನುಗು ಇರತಕ್ಕ ಮಳಲನ್ನು ತಂದು ಅದರಲ್ಲಿ ಸ್ವಲ್ಪ ಬಿಳಿ ಸಾಸುವೆಯನ್ನು ಕಲಸಿ ಪೂಜಿಸಿ ೨೧ ಸಾರಿ ಮಂತ್ರಿಸಿ ಹೊಲದ ಸುತ್ತಲೂ ಮಧ್ಯದಲ್ಲೂ ಹಾಕಲು ಮೂಷಕ, ವಿ ಕ ಮುಂತಾದ ಮೃಗಪಕ್ಷಿ ಕ್ರಿಮಿಕೀಟಕಗಳು ಬೆಳೆಯನ್ನು ಮುಟ್ಟುವದಿಲ್ಲ. ಈ ಕ್ರಮವನ್ನು ಗುರುವಾರ ಭಾನುವಾರ ಮಾಡತಕ್ಕದ್ದು. ಈ ಮಂತ್ರಗಳನ್ನು ಹಿಂದೆ ಹೇಳಿದ ಪ್ರಕಾರ ಸಿದ್ಧಿಯನ್ನು ಮಾಡಿಕೊಳ್ಳಬೇಕು.

ವನ್ನು ನೆಲದಲ್ಲಿ ಒಗೆಯಬೇಕು. ಅದರಲ್ಲಿ ಮೇಲುಮುಖವಾಗಿ ಬಿದ್ದ ಎಲೆಗಳು ಚೇಳಾಗುವವು. ಬೋರಲು ಬಿದ್ದ ಎಲೆಗಳು ಚೇಳಾಗುವದಿಲ್ಲ.

ಚೇಶ್ರೀ ಚೇಚ ಪ್ರಯೋಗೋಯಂ ವಶಾಯಚಜಯಾಯಚ ॥

ಮಂತ್ರ ॥ ಚೇಶ್ರೀ ಚೇಚ ಪ್ರಯೋಗೋಯಂ ... ಭಗವತಿ ಅಂಬಿಕೇ ಕುಬ್ಜಿಕೇ ಸ್ವೇಓಂಭಂತಂ ವಶ ವಂ ಕ್ರೀಂ ಶ್ರೀಂ ಸ್ವೇಕ್ಷ್ಮಿ ಭಗವತಿ ... ವ್ರಾರ್ರಿ ಕಿಲಿಕಿಲಿ ಪಿಚ್ಚಾ ರ್ರಾಹೇ ಸ್ವ ಶ್ರೀ ನಮೋ ಅಘೋರಾಯ ಮುಖೇ ವ್ರಾರ್ರಿ ಕಿಲಿಕಿಲಿ ಪಿಚ್ಚಾ ರ್ರಾಹೇ ಸ್ವ ಶ್ರೀ

ಕ್ರೀ ಐ ಶ್ರೀಮತಿ ಕುಬ್ಜಿಕಾಯೈ ಸ್ವಾಹಾ ॥

ಈ ಮಂತ್ರವನ್ನು ಸಿದ್ಧಿ ಮಾಡಿಕೊಳ್ಳುವದು ಹೇಗೆಂದರೆ—ವೈಶಾಖ ಮಾಸದಲ್ಲಿ ಕೃತ್ತಿಕಾ ನಕ್ಷತ್ರ ಬಂದ ದಿವಸ ಪ್ರಾತಃಕಾಲದಲ್ಲಿ ಶುಚಿರ್ಭೂತನಾಗಿ ಒಂದು ಗುಡ್ಡದ ಪ್ರದೇಶದಲ್ಲಿ ಬನ್ನಿಮರವನ್ನು ಹುಡುಕಿ ಆ ಗಿಡಕ್ಕೆ ಷೋಡಶೋಪಚಾರಗಳಿಂದ ಪೂಜಾದಿಗಳನ್ನು ಮಾಡಿ ಆ ಗಿಡದ ನೆರಳು ಬೀಳದಂತೆ ಸ್ವಲ್ಪ ದೂರದಲ್ಲಿ ಒಂದು ಏಕಾಕಾರವಾದ ಬಂಡಿಯಲ್ಲಿ ಕುಳಿತುಕೊಂಡು ಅಲ್ಲಿ ಒಣಗಿರುವ ತರದ ಕಟ್ಟಿಗೆಗಳಿಂದ ಉರಿಯನ್ನು ಹಾಕಿ ಆ ಉರಿ (ಜ್ವಾಲೆ) ಆರದ ಹಾಗೆ ಇಟ್ಟು ಕೊಂಡು ಈ ಮಂತ್ರವನ್ನು ಹತ್ತುಸಾವಿರ ಆವೃತ್ತಿ (೧೦,೦೦೦) ಜಪವನ್ನು ಮಾಡಬೇಕು. ಈ ಪ್ರಕಾರ ಎಷ್ಟು ದಿವಸಕ್ಕೆ ಆ ಜಪವು ಮುಗಿಯುವದೋ ಅಷ್ಟು ದಿನವೂ ಮಾಡಬೇಕು. ಮೃಗಾದಿಗಳಿಗೆ ಹೆದರಬಾರದು. ಹೀಗೆ ಮಾಡಿದ ನಂತರ ಈ ಜಪಸಂಖ್ಯೆ ಎಷ್ಟು ಆಗುತ್ತದೋ ಅದಕ್ಕೆ ದಶಾಂಶತರ್ಪಣವು, ಇದಕ್ಕೆ ದಶಾಂಶ ಹೋಮವು, ತದ್ದಶಾಂಶ ಬ್ರಾಹ್ಮಣ ಭೋಜನವು ಶಾಂತಿಯಂ ಮಾಡಿಕೊಳ್ಳಲು ಈ ಮಂತ್ರಸಿದ್ಧಿಯಾಗುತ್ತದೆ. ಈ ಮಂತ್ರದಿಂದ ಚೇಳು ಆಗುವದಲ್ಲದೆ, ತನಗಾಗಲಿ ತಾನು ವಾಸ ಮಾಡಿದ ಗೃಹಕ್ಕಾಗಲಿ ಯಾವ ವಿಧವಾದ ಚೇಳಿನ ಭಯವೂ ಇರುವದಿಲ್ಲ. ಚೇಳು ಕಡಿದವರು ಬಂದು ಹೇಳಿಕೊಳ್ಳಲು ನಿನಗಲ್ಲ ಮತ್ತೊಬ್ಬರಿಗೆ ಕಡಿದಂತೆ ಎಂದು ಹೇಳಲು ಕಡಿಸಿಕೊಂಡವರು ಸುಮ್ಮನಾದಾರು ಮತ್ತೊಬ್ಬರಳುವರು. ಹೀಗೆ ೪ ಜನರಿಗೆ ಈ ಚೇಳಿನ ಬಾಧೆಯನ್ನು ತಿರಿಗಿಸಿದ ನಂತರ ಒಂದು ಗೋಡೆಯನ್ನು ತೋರಿಸಿ ಈ ಗೋಡೆಗೆ ಕಡಿದಿದೆ ನಿನಗೆ ಕಡಿಯಲಿಲ್ಲವೆಂದು ಹೇಳಿದ ಕೂಡಲೆ ಆ ಗೋಡೆಯು ಮಣ್ಣಾಗಲೆ ಉದುರಿ ಕೆಳಗೆ ಬೀಳುವದು.

ಟಗರಿನ ಕಾಳಗ ಗೆಲ್ಲುವ ಕ್ರಮು.

ಆದಿತ್ಯವಾರ ದಿವಸ ಪ್ರಾತಃಕಾಲದಲ್ಲಿ ಸ್ನಾನ ಮಾಡಿ ಶೀಗುಡುಕೆ ಗಿಡದ ಹತ್ತರ ಹೋಗಿ ಅಲ್ಲಿ ಈ ಗಿಡವನ್ನು ಪೂಜಾದಿಗಳನ್ನು ಮಾಡಿ ಆ ಗಿಡದ ಬೇರನ್ನು ಮನೆಗೆ ತೆಗೆದುಕೊಂಡು ಬಂದು ಮತ್ತು ಈ ಮಂತ್ರದಿಂದ ೧೦೮ ಸಾರಿ ಮಂತ್ರಿಸಿ ಇಟ್ಟುಕೊಳ್ಳಬೇಕು. ಟಗರಿನ ಜೂಜು ಜರುಗುವ ದಿವಸ ಆ ಬೇರನ್ನು ...

ಮಂತ್ರಿಸಿದ ಬೇವಿನ ಕೊಪ್ಪಲಿಗೆ ಸ್ವಲ್ಪ ಹಚ್ಚಿ ಒಗೆಯಲು ಅಂಗಾತ ಬಿದ್ದ ಬೇವಿನ ಎಲೆಗಳು ಚೇಳುಗಳು ಆಗುತ್ತವೆ. ಮತ್ತು ಒಂದು ಹಗ್ಗವನ್ನು ಅಂತರದಲ್ಲಿ ಕಟ್ಟಿ ಇಂದ್ರಜಾಲ ಮಂತ್ರದಿಂದ ೧೦೮ ಸಾರಿ ಮಂತ್ರಿಸಿ ಆ ತೈಲವನ್ನು ಹಚ್ಚಿದರೆ ಹಾವಾಗಿ ಕಾಣುವದು, ಸರ್ವರೂ ನೋಡಿ ಆಶ್ಚರ್ಯಪಡುವರು. ಈ ತೈಲವನ್ನು ಒಂದು ಪ್ರಣತಿಯಲ್ಲಿ ಹಾಕಿ ಕರಿ ಹತ್ತಿಯಿಂದ ಮಾಡಿದ ಬತ್ತಿಯನ್ನು ಇಂದ್ರಜಾಲ ಮಂತ್ರದಿಂದ ೧೦೮ ಸಾರಿ ಮಂತ್ರಿಸಿ ದೀಪ ಹಚ್ಚಲು ಅಲ್ಲಿದ್ದವರೆಲ್ಲರೂ ಬೆಕ್ಕಿನಂತೆ ಕಾಣುವರು. ದೀಪವನ್ನು ತೆಗೆದರೆ ಹೋಗುವದು. ಈ ತೈಲದಿಂದ ಉಂಟಾದ ಹಾವು ಚೇಳುಗಳು ಹೋಗುವಂತೆ ಮಾಡಬೇಕಾದರೆ ನೆತ್ತರಗೊಡಚಿ ಬೀಜ, ಹುಲಗಲ ಬೀಜ ಇವನ್ನು ಸಮನಾಗಿ ತೆಗೆದು ಕೊಂಡು ಅಂಬಿಲದಲ್ಲಿ ೩ ದಿವಸ ನೆನೆಯಿಟ್ಟು ತೆಗೆದುಕೊಂಡು ಸಣ್ಣಗೆ ಅರೆದು ಖಡ್ಗಕ್ಕೆ ಹಚ್ಚಿ ಮೇಲಿನಂತೆ ಅಂತರದಲ್ಲಿ ಸೂರ್ಯಪುಟಕ್ಕೆ ಇಟ್ಟು ಆ ಖಡ್ಗದ ಬುಡದಲ್ಲಿ ಹುಲಗಲ ಕಟ್ಟಿಗೆಯಿಂದ ಮಾಡಿದ ಭರಣಿಯನ್ನು ಇಟ್ಟು ಆ ಭರಣಿಯಲ್ಲಿ ಬಿದ್ದ ತೈಲವನ್ನು ಅದರಲ್ಲಿಯೇ ಇಟ್ಟುಕೊಂಡು ಈ ತೈಲವನ್ನು ಬೇವಿನ ಕೊಪ್ಪಲಿಗೆ ಹಚ್ಚಿ ಚೇಳಾದ ಬೇವಿನ ಕೊಪ್ಪಲಿಗೆ ಎಸೆಯಲು ಚೇಳುಗಳು ಮಾಯವಾಗುವವು. ಈ ತೈಲವನ್ನು ಕೈಗೆ ಹಚ್ಚಿಕೊಂಡು ಹಾವಾದ ಹಗ್ಗವನ್ನು ಮುಟ್ಟಲು ಹಾವಾದದ್ದು ಹಗ್ಗವಾಗುವದು. ಅಂಕೋಲೆ ತೈಲವನ್ನು ಮಾತ್ರ ವಸಂತ ಋತುವಾದ ಚೈತ್ರ ಹಾಗೂ ವೈಶಾಖ ಮಾಸಗಳಲ್ಲಿಯ ಬಿಸಿಲಿನಲ್ಲಿಯೇ ಮಾಡಬೇಕು.

ಅಥ ಕಲ್ಲುಗುಂಡುಗಳು ಬಡಿದಾಡುವ ಕ್ರಮ.

ಜ್ಯೇಷ್ಠಾ ನಕ್ಷತ್ರದಲ್ಲಿ ನೊಣಮುಟ್ಟಗನ ತೊಪ್ಪಲು, ಪುನರ್ವಸೂ ನಕ್ಷತ್ರದಲ್ಲಿ ಹರವ ಹತ್ತಗನ ಗೊಪ್ಪಲು (ಈ ತೊಪ್ಪಲಲ್ಲಿ ಹೆಣ್ಣು ಗಂಡು ಎಂಬದಾಗಿ ಎರಡು ಭೇದವುಂಟು. ಅದರಲ್ಲಿ ಗಂಡು ತೊಪ್ಪಲು), ಉತ್ತರಾಷಾಢ ನಕ್ಷತ್ರದಲ್ಲಿ ಬೆಕ್ಕಿನ ಹೆಜ್ಜೆ ತೊಪ್ಪಲು, ಪುಷ್ಯ ನಕ್ಷತ್ರದಲ್ಲಿ ಹೊರಮುಚ್ಚಗನ ತೊಪ್ಪಲು ಈ ನಾಲ್ಕು ಗಿಡಮೂಲಿಕೆಗಳನ್ನು ಮೇಲೆ ಹೇಳಿದ ನಕ್ಷತ್ರಗಳಲ್ಲಿ ಸ್ನಾನ ಮಾಡಿಕೊಂಡು ಹೋಗಿ ಪೂಜೆ ಮಾಡಿ ತಂದು ಇಟ್ಟುಕೊಂಡು ಅಮಾವಾಸ್ಯೆಯ ದಿವಸ ಸ್ಮಶಾನಕ್ಕೆ ಹೋಗಿ ಅಲ್ಲಿ ಒಂದು ಸ್ಥಳದಲ್ಲಿ ಗೋದಿಯ ಕಣಕದಿಂದ ಮಾಡಿದ ಒಂದು ಗೊಂಬೆಯನ್ನು ಇಟ್ಟು ೧೦೮ ಕೆಂಪು ಕಣಗಿಲ ಹೂವಿನಿಂದ ೧೦೮ ಸಾರಿ ಇಂದ್ರಜಾಲ ಮಂತ್ರವನ್ನು ಪಠನ ಮಾಡುತ್ತ ಆ ಗೊಂಬೆಯನ್ನು ಅಷ್ಟವಿಧಾರ್ಚನೆಯಿಂದ ಪೂಜಿಸಿ ಅನಂತರ ಆ ಗೊಂಬೆಯ ಮುಂಭಾಗದಲ್ಲಿ ಮೇಲಿನ ನಾಲ್ಕು ಗಿಡಮೂಲಿಕೆಗಳನ್ನು ಸಮನಾಗಿ ಕೂಡಿಸಿ ಸಣ್ಣಗೆ ಅರೆದು ಒಳ್ಳೆಣ್ಣೆಯಲ್ಲಿ ಕಲಿಸಿ ಒಂದು ಪ್ರಣತಿಯಲ್ಲಿ ಹಾಕಿ ಕರಿಯ ಹತ್ತಿಯ ಬತ್ತಿಯನ್ನು ಮಾಡಿ ದೀಪ ಹಚ್ಚಿ

ಹಾಕಿಕೊಂಡು ಆವೇಶದ ಮಂತ್ರವಾದ ಹಿಂದಿನ ಮಂತ್ರವನ್ನು ಮಂತ್ರಿಸಲು ಮನೆಯೊಳಗಿದ್ದ ಗ್ರಹವಾಗಲಿ, ಭೂತವಾಗಲಿ, ಬ್ರಹ್ಮರಾಕ್ಷಸವಾಗಲಿ ಬಂದು ಮಾತನಾಡಿ ಹೋಗುವವು. ಶೂನ್ಯದ ಗೊಂಬೆಯು ಕಾಣಬರುವದು.

ಭಾಂಡ ತಂತ್ರವು.

ಭಾನುವಾರವು ಅಮಾವಾಸ್ಯೆಯು ಕಲಿತ ದಿನದಲ್ಲಿ ಶುಚಿರ್ಭೂತನಾಗಿ ಚಿತ್ರ ಮೂಲದ ಬೇರು, ಕಿರುಕಸಾಲೆ ಬೇರು, ಈ ಎರಡನ್ನು ತಂದು ಪೂಜೆಯನ್ನು ಮಾಡಿ ಹಿಂದಿನ ಮಂತ್ರದಿಂದ ೯ ಸಾರಿ ಮಂತ್ರಿಸಿ ಆ ಬೇರುಗಳನ್ನು ತುಂಬಿ ಮಣ್ಣಿನ ಕೊಡದಲ್ಲಿ ಹಾಕಿ ಕಲ್ಲಿನಿಂದ ಕುಟ್ಟಿದರೂ ಕೊಡ ಒಡೆಯುವದಿಲ್ಲ.

ತೆಂಗಿನಕಾಯನ್ನೊಡೆಯುವದು.

ಉತ್ತರಣೆ ಬೀಜ, ಕಳ್ಳೀ ಬೀಜ ಈ ಎರಡನ್ನು ಅರೆದು ಕೈಗೆ ಹಚ್ಚಿಕೊಂಡು ತೆಂಗಿನಕಾಯನ್ನು ಮೆಲ್ಲಗೆ ಗುದ್ದಿದರೂ ತತ್‌ಕ್ಷಣವೇ ಒಡೆಯುವದು.

ಇದಕ್ಕೆ ಇಂದ್ರಜಾಲ ಮಂತ್ರವನ್ನು ಉಪಯೋಗಿಸಬೇಕು.

ಮತ್ತೊಂದು ವಿಧ.

ಬಸವನಪಾದದ ಬೀಜವನ್ನೊಣಗಿಸಿ (ಚೇಳು ಕೊಂಡಿಗಿಡದ ಬೀಜದ) ಎಣ್ಣೆಯನ್ನು ತೆಗೆದು ಇಟ್ಟುಕೊಂಡು ಕೈಗೆ ಸ್ವಲ್ಪ ಎಣ್ಣೆಯನ್ನು ಹಚ್ಚಿಕೊಂಡು ತೆಂಗಿನಕಾಯನ್ನು ಮೆಲ್ಲಗೆ ಗುದ್ದಿದರೆ ತತ್‌ಕ್ಷಣ ಒಡೆಯುವದು.

ಮರವನ್ನು ಮುಟ್ಟಿದ ಕೂಡಲೆ ಕಾಯಿ ಬೀಳುವಂತೆ ಮಾಡುವ ಕ್ರಮ.

ಆದಿತ್ಯವಾರ ಅಥವಾ ಗುರುವಾರ ಅಮಾವಾಸ್ಯೆ ಬಂದ ದಿವಸ ಕರಿಯ ಬೆಕ್ಕಿನ ಮೀಸೆಯನ್ನು ತಂದು ಅತ್ತೆಯ ಮನೆಯಲ್ಲಿ ಪೂಜಿಸಿ ಪಂಚವರ್ಣದ ನೂಲು ಸುತ್ತಿ ತಾಮ್ರದ ಉಂಗರದೊಳಗೆ ಹುದಿಗಿಸಿ ಬೆರಳಿಗೆ ಇಟ್ಟುಕೊಂಡು ಮರವನ್ನು ಮುಟ್ಟಲು ಕಾಯಿ ಬೀಳುವವು.

ಇದಕ್ಕೆ ಇಂದ್ರಜಾಲ ಮಂತ್ರವನ್ನೇ ಉಪಯೋಗಿಸಬೇಕು.

ಸೋರದ ಗಡಿಗೆ.

ನೆಗ್ಗಿಲು ಗಿಡದ ಸಮೂಲವನ್ನು ತಂದು ಅರೆದು ಗಡಿಗೆಯೊಳಮಗ್ಗಲು ಹಚ್ಚಿ ತೂತನ್ನು ತೆಗೆದು ನೀರನ್ನು ಹಾಕಿದರೂ ಸೋರುವದಿಲ್ಲ.

ಬರೆಯದ ಕಾಗದದಲ್ಲಿ ಅಕ್ಷರಗಳನ್ನು ಕಾಣಿಸುವಿಕೆ.

ಬಿಳಿ ಕಾಗದದ ಮೇಲೆ ಮರಚೆಡ್ಡಿ ಗಿಡದ ಹಾಲನ್ನು ತೆಗೆದುಕೊಂಡು ತನಗೆ ಬೇಕಾದ ಅಕ್ಷರಗಳನ್ನು ಬರೆದು ಒಣಗಿಸಿ ಇಟ್ಟುಕೊಳ್ಳುವದು. ಅದನ್ನು ಸಭೆಯೊಳಗೆ ಎಲ್ಲರಿಗೂ ತೋರಿಸಲು ಅದರಲ್ಲಿ ಅಕ್ಷರಗಳು ಕಾಣುವದಿಲ್ಲ.

ಗರುಡ ಯಂತ್ರ.

ಗ	ರು	ಡ	ನು
ರು	ಗ	ನು	ಡ
ಡ	ನು	ಗ	ರು
ನು	ಡ	ರು	ಗ

ಈ ಯಂತ್ರವನ್ನು ತಾಮ್ರದ ತಗಡಿನ ಮೇಲೆ ಬರೆದು ಪೂಜಿಸಿ ಕಟ್ಟಿಕೊಂಡರೆ ಸರ್ಪದ ಭಯವಿಲ್ಲ; ಮನೆಯಲ್ಲಿ ಜಂತಿಗಳಿಗೆ ಕಟ್ಟಿದರೆ ಸರ್ಪದ ಭಯವಿಲ್ಲ. ಹಾವು ಕಚ್ಚಿದರೆ ಈ ಯಂತ್ರವನ್ನು ನೀರಿನಲ್ಲಿ ಎದ್ದಿ ಆ ನೀರನ್ನು ಐದು ಸಾರಿ ಕುಡಿಸಿದರೆ ವಿಷವು ಪರಿಹಾರವಾಗುವದು.

ಪಶುಗಳ ದೃಷ್ಟಿನಿವಾರಣ ಯಂತ್ರ.

೩೪	೪೧	೨	೭
೬	೩	೩೮	೩೭
೪೦	೩೫	೮	೧
೪	೫	೩೬	೩೯

ಈ ಯಂತ್ರವನ್ನು ತಾಮ್ರದ ತಗಡಿನಲ್ಲಿ ಬರೆದು ಸ್ವಲ್ಪ ಜಟಾಮಾಂಸಿ, ಕರಿಯ ಉಣ್ಣೆ, ಬಿಳಿಯ ಉಣ್ಣೆ (ಕುರಿ ತುಪಟ) ಹಾಕಿ ಸುರುಳಿ ಸುತ್ತಿ ಪೂಜಿಸಿ ಪಶುಗಳ ಕೊರಳಿಗೆ ಕಟ್ಟಿದರೆ ಪಶುಗಳ ಸಮಸ್ತ ವಿಧವಾದ ದೃಷ್ಟಿದೋಷಗಳೂ ರೋಗಗಳೂ ಮುಂತಾದವು ನಿವಾರಣೆಯಾಗುವವು.

ಪಶುಗಳು ತಪ್ಪಿಸಿಕೊಂಡು ಹೋದರೆ ಸಿಕ್ಕುವ ಯಂತ್ರ.

ಓಂ	ದೇ	ವ	ದ	ತ್ತ

ಈ ಯಂತ್ರವನ್ನು ಒಂದು ಮಣೆಯ ಮೇಲೆ ಇದ್ದಲಿಯಿಂದ ಬರೆದು ಪಶುಗಳನ್ನು ಕಟ್ಟುವ ಗೂಟಕ್ಕೆ ಕಟ್ಟಿ ಪೂಜಿಸಿದರೆ ತಪ್ಪಿಸಿಕೊಂಡು ಹೋದ ಪಶುಗಳು ಒಂದೇ ದಿವಸಕ್ಕೆ ಬರುತ್ತವೆ.

ಹೊಲಕ್ಕೆ ಹುಳಗಳು ಹತ್ತಿದರೆ ನಿವಾರಣೆಯಾಗುವ ಯಂತ್ರ.



ಈ ಯಂತ್ರವನ್ನು ಕಾಗದದ ಮೇಲೆ ಬರೆದು ಹೊಲದ ನಾಲ್ಕು ಮೂಲೆಗಳಿಗೂ ಕಟ್ಟಿದರೆ ಹುಳಗಳು ನಿವಾರಣೆಯಾಗುವವು.

ಕೆಂಡದ ಮೇಲೆ ಲೋಭಾನವನ್ನು ಹಾಕಿ ಹೊಗೆಗೆ ಹಿಡಿದು ಮಂತ್ರಿಸಿದಂತೆ ಸ್ವಲ್ಪ ಬಿಸಿ ತೋರಿಸಲು ನೀನು ಬರೆದ ಅಕ್ಷರಗಳು ಕಾಣುವವು. ಎಲ್ಲರೂ ಆಶ್ಚರ್ಯ ಪಡುವರು.

ಅರಳು ಮಾಡುವದು.

ಯಾವದಾದರೊಂದು ಧಾನ್ಯವನ್ನು ತೆಗೆದುಕೊಂಡು ಸಣ್ಣ ಬಟ್ಟೆಯೊಳಗೆ ತನಗೆ ಬೇಕಾದಷ್ಟು ಗಂಟನ್ನು ಕಟ್ಟಿ ಸುಣ್ಣದ ಕಲ್ಲುಗಳೊಳಗೆ ಹಾಕಿ ಕಾಣದ ಹಾಗೆ ಮುಚ್ಚಿಟ್ಟು ಮೇಲೆ ನೀರು ಹೊಯ್ದರೆ ಸುಣ್ಣವಾಗುವದು. ಆ ಸುಣ್ಣವನ್ನು ತೆಗೆದು ಕೆಳಗಿನ ಗಂಟನ್ನು ತೆಗೆದುಕೊಂಡು ಆ ಕಾಳನ್ನು ಚೆನ್ನಾಗಿ ಒಣಗಿಸಿ ಇಟ್ಟುಕೊಂಡು ತನಗೆ ಬೇಕಾದಾಗ ಆ ಕಾಳನ್ನು ಬಟ್ಟೆಯೊಳಗೆ ಹಾಕಿ ಸ್ವಲ್ಪ ನೀರು ಚಿಮುಕಿಸಿ ಕೈಯಿಂದ ಆಡಿಸಲು ಅರಳಾಗುವವು.

ಸುಟ್ಟ ದಾರದಲ್ಲಿ ಉಂಗರವು ನೇತಾಡುವಿಕೆ.

ಕೊಂಚ ನೀರಿನಲ್ಲಿ ಉಪ್ಪು ಕಲಿಸಿ ಅದರಲ್ಲಿ ಒಂದು ಗಜದುದ್ದ ದಾರವನ್ನು ನೆನೆಯಿಸಿ ಒಣಗಿಸಿ ಆ ದಾರಕ್ಕೆ ಒಂದು ಉಂಗರವನ್ನ ಕಟ್ಟಿ ಯಾವದಕ್ಕಾದರೂ ನೇತಾಡುವಂತೆ ಕಟ್ಟಬೇಕು. ಹಾಗಿರುವ ಉಂಗರವನ್ನು ಸಭೆಯವರಿಗೆ ತೋರಿಸಿ ನೋಡಿ ಈ ದಾರವು ಸುಟ್ಟರೂ ಉಂಗುರವು ಕೆಳಗೆ ಬೀಳುವದಿಲ್ಲವೆಂದು ಹೇಳಿ ಒಂದು ದೀಪದ ಕಡ್ಡಿ ಕೆರೆದು ಸುಟ್ಟರೂ ಅದು ಸುಡುವದಿಲ್ಲ. ಎಲ್ಲರೂ ಆಶ್ಚರ್ಯ ಪಡುವರು.

ಸುಟ್ಟರೆ ಸುಡದ, ಕಾಗದ

ನೀರಿನಲ್ಲಿ ಚೆನ್ನಾಗಿ ಪಟಿಕವನ್ನು ಕಲಿಸಿ ಅದರಲ್ಲಿ ಒಂದು ಕಾಗದವನ್ನು ಸ್ವಲ್ಪ ಹೊತ್ತು ನೆನೆ ಹಾಕಿ ಒಣಗಿಸಬೇಕು. ಹೀಗೆ ಎರಡು ಮೂರು ಸಾರಿ ಒಣಗಿಸಿ ನೆನೆ ಹಾಕಿ ತಯಾರು ಮಾಡಿಟ್ಟುಕೊಂಡು ಸಭೆಯೊಳಗೆ ಆ ಕಾಗದವನ್ನು ಎಲ್ಲರಿಗೂ ತೋರಿಸಿ ದೀಪದ ಕಡ್ಡಿ ಕೆರೆದು ಸುಟ್ಟರೂ ಅದು ಸುಡುವದಿಲ್ಲ. ಎಲ್ಲರೂ ಆಶ್ಚರ್ಯಪಡುವರು.

ಅಥ ಅಂಕೋಲೆಯ ತೈಲವನ್ನು ಮಾಡುವ ಕ್ರಮ.

ಅಶ್ವಿನೀ ನಕ್ಷತ್ರದಲ್ಲಿ ಅಂಕೋಲೆಯ ಬೀಜವನ್ನು ತಂದು ಅಂಬಿಲದಲ್ಲಿ ಒಂದು ದಿವಸ ನೆನೆಯಿಟ್ಟು ಮರುದಿವಸ ತೆಗೆದುಕೊಂಡು ಸಣ್ಣಗೆ ಅರೆದು ಅದನ್ನು ಖಡ್ಗಕ್ಕೆ ಹಚ್ಚಿ ತುದಿ ಕೆಳಗೆ ಮಾಡಿ ಅಂತರದಲ್ಲಿ ಸೂರ್ಯಪುಟಕ್ಕೆ ಇಟ್ಟು ಆ ಖಡ್ಗದ ಬುಡದಲ್ಲಿ ಅಂಕೋಲೆಯ ಕಟ್ಟಿಗೆಯಿಂದ ಮಾಡಿದ ಭರಣಿಯನ್ನ ಇಡಬೇಕು. ಆ ಭರಣಿಯಲ್ಲಿ ಮೇಲಿನ ಖಡ್ಗದಿಂದ ಬಿದ್ದ ತೈಲವನ್ನು ಇಟ್ಟುಕೊಂಡು ಬೇವಿನ ಕೊಪ್ಪಲವನ್ನು ತಂದು ಹಿಂದಿನ ಇಂದ್ರಜಾಲ ಮಂತ್ರದಿಂದ ೧೦೮ ಸಾರಿ

ಅವರ ಕಾಡಿಗೆಯನ್ನು ಹಿಡಿದು ಒಂದು ಭರಣಿಯಲ್ಲಿ ಹಾಕಿಕೊಂಡು ಬರಬೇಕು. ತನಗೆ ಬೇಕಾದಾಗ ಒಂದು ಗುಲಗಂಜಿಯಷ್ಟು ಕಾಡಿಗೆಯನ್ನು ಎರಡು ಕೈಗೆ ಹಚ್ಚಿಕೊಂಡು ಮುಂಭಾಗದಲ್ಲಿ ಎರಡು ಕಲ್ಲುಗುಂಡುಗಳನ್ನಿಟ್ಟು ಬಲಭಾಗದಲ್ಲಿ ಇರುವ ಗುಂಡಿಗೆ ಬಲಗೈಯನ್ನೂ ಎಡಭಾಗದಲ್ಲಿರುವ ಗುಂಡಿಗೆ ಎಡಗೈಯನ್ನೂ ಮುಟ್ಟಿಸಿ ಹಿಂದಕ್ಕೆ ಸರಿದು ಇಂದ್ರಜಾಲ ಮಂತ್ರವನ್ನು ಜಪಿಸುತ್ತ ಎರಡು ಕೈಗಳನ್ನು ಕೂಡಿಸಲು ಆ ಗುಂಡುಗಳು ಬಡಿದಾಡುವವು. ಕೈಯನ್ನು ಅಗಲಿಸ ದರೆ ಆಗಲುವವು. ಇದನ್ನು ನೋಡಿ ಸರ್ವರೂ ಆಶ್ಚರ್ಯಪಡುವರು.

ಅಥ ಕಾಗದದಲ್ಲಿ ಬರೆದ ಅಕ್ಷರಗಳನ್ನು ಕೈಯಲ್ಲಿ ತೋರಿಸುವ ಕ್ರಮವು.

ಆಪ್ತಮಿತ್ರರ ಮುಂದೆ ಒಂದು ಕಾಗದದಲ್ಲಿ ಅವರಿಗೆ ಬೇಕಾದ ಅಕ್ಷರಗಳನ್ನು ಬರೆಯಿಸಿ ಆ ಕಾಗದವನ್ನು ಅವರ ಕೈಯಲ್ಲಿ ಕೊಟ್ಟು ಆ ಕಾಗದದಲ್ಲಿ ಇರುವ ಅಕ್ಷರಗಳನ್ನು ನೋಡಿಕೊಂಡು ಒಂದು ಮರೆಯಾದ ಸ್ಥಳದಲ್ಲಿ ಹೋಗಿ ಆ ಅಕ್ಷರದಂತೆ ತನ್ನ ಕೈಯಲ್ಲಿ ನೀರುಳ್ಳಿ (ಉಳ್ಳಿಗೆಡ್ಡೆ) ರಸದಿಂದ ಬರೆದು ಸ್ವಲ್ಪ ಆರಿಸಿಕೊಂಡು ಬಂದು ಸರ್ವರಿಗೂ ಕೈಯನ್ನು ತೋರಿಸಿ ಅಕ್ಷರವನ್ನು ಬರೆದ ಕಾಗದವನ್ನು ಸುಟ್ಟು ಕೈಗೆ ತಿಕ್ಕಿಕೊಳ್ಳಲು ಕಾಗದದಲ್ಲಿ ಇದ್ದ ಅಕ್ಷರ ಕೈಯಲ್ಲಿ ಬರುತ್ತವೆ. ಸರ್ವರೂ ನೋಡಿ ಆಶ್ಚರ್ಯಪಡುವರು.

ಕಾಗದದಲ್ಲಿ ಕರಿಗಡಬನ್ನು ಕರಿಯುವ ಕ್ರಮ.

ಕರಿ ನೆಗ್ಗಿಲಿನ ಹಸಿ ತೊಪ್ಪಲನ್ನು ತಂದು ಸಣ್ಣಾಗಿ ಅರೆದು ರಸವನ್ನು ತೆಗೆದುಕೊಂಡು ಕಾಗದಕ್ಕೆ ಮೂರು ವೇಳೆ ಹಚ್ಚಿ ನೆರಳಲ್ಲಿ ಒಣಗಿಸಿ ದೊನ್ನೆಯನ್ನು ಮಾಡಿ ಅದರಲ್ಲಿ ಎಣ್ಣೆಯನ್ನು ಹಾಕಿ ಕರಿಗಡಬು ಕರಿಯಲು ಕಾಗದ ಸುಡುವದಿಲ್ಲ.

ಕಾದ ಹಾರೆಯನ್ನು ಹಿಡಿಯುವ ಕ್ರಮ.

ಕೆಂಪು ಲವಳಸರ, ಸ್ವಲ್ಪ ಪಾದರಸ ಇವು ಎರಡನ್ನೂ ಕೂಡಿಸಿ ಕೈಗಳಿಗೆ ಹಚ್ಚಿಕೊಂಡು ಇಂದ್ರಜಾಲ ಮಂತ್ರವನ್ನು ಜಪಿಸುತ್ತ ಕಾದ ಹಾರೆಯನ್ನು ಹಿಡಿಯಲು ಕೈಗಳು ಸುಡುವದಿಲ್ಲ

ಚೇಳನ್ನು ಮಾಡುವಿಕೆ.

ಆದಿತ್ಯವಾರ ಅಮಾವಾಸ್ಯೆ ಕಲೆತು ಬಂದ ದಿವಸ ಒಂದು ಚಿಕ್ಕ ಹೊಸ ಗಡಿಗೆಯಲ್ಲಿ ೨ ಚೇಳು ೨ ಹಲ್ಲಿ ಇವುಗಳನ್ನು ಹಿಡಿದು ಹಾಕಿ ೯ ದಿವಸ ಬಾಯಿ ಚೆನ್ನಾಗಿ ಕಟ್ಟಿಡಬೇಕು. ಅನಂತರ ಬಾಯಿ ಬಿಚ್ಚಿ ಅದರಲ್ಲಿದ್ದ ಅವುಗಳ ಹಿಕ್ಕೆಯನ್ನು ತೆಗೆದುಕೊಂಡು ಈ ಕೆಳಗೆ ಬರೆದ ಮಂತ್ರದಿಂದ ಮಂತ್ರಿಸುತ್ತ ಆ ಹಿಕ್ಕೆಯನ್ನು ಕೈಯಲ್ಲಿ ತೆಗೆದುಕೊಂಡು ಚೆನ್ನಾಗಿ ತಿಕ್ಕಿದ ಕೂಡಲೆ ಬೇವಿನ ಕೊಪ್ಪಲ

೪ ನೆಯ ದಿವಸದ ಚಳಿಜ್ವರದ ಯಂತ್ರವು.

ಹ್ರಾಂ	ಹ್ರಾಂ	ಹ್ರಾಂ	ಹ್ರಾಂ	ಹ್ರಾಂ	(
ಕ್ಷ	ಕ್ಷ	ಕ್ಷ	ಕ್ಷ	ಕ್ಷ	
ಅಂ	ಅಂ	ಅಂ	ಅಂ	ಅಂ	
ಹ್ರೀ	ಹ್ರೀ	ಹ್ರೀ	ಹ್ರೀ	ಹ್ರೀ	)

ಈ ಯಂತ್ರವನ್ನು ತಾಮ್ರದ ತಗಡಿನಲ್ಲಿ ಬರೆದು ಬಲಭಾಗದ ಮನೆಗಳಲ್ಲಿ ಬ್ರಾಕೆಟ್ಟಿನಲ್ಲಿ ಜ್ವರ ಬಂದವನ ಹೆಸರನ್ನು ಬರೆಯಬೇಕು.

ಮಂತ್ರ ॥ ಓಂ ನಮೋ ಭಗವತೇ ಸ್ವಾಹಾ ॥ ಈ ಮಂತ್ರದಿಂದ ಮಂತ್ರಿಸಿ ಧೂಪ ಹಾಕಿ ಧರಿಸಿಕೊಳ್ಳಲು ಚಳಿಜ್ವರ ನಿವಾರಣೆಯಾಗುತ್ತದೆ.

ಸಾಧಾರಣ ಜ್ವರದ ಯಂತ್ರ.

ಹೋ	ಕ್ಷಿ
ಹೋ	ಕ್ಷಿ

ಈ ಯಂತ್ರವನ್ನು ಪಂಚಲೋಹದ ತಗಡಿನಲ್ಲಿ ಬರೆದು ಒಂದು ತಾಯಿತದಲ್ಲಿ ಗೋರೋಜನ ಕಸ್ತೂರಿ ಸಹ ಹಾಕಿ ಪೂಜಿಸಿ ಕಟ್ಟಲು ಜ್ವರವು ನಿವಾರಣೆಯಾಗುವುದು.

೨ ನೆಯ ದಿವಸ ಬರತಕ್ಕ ಜ್ವರಕ್ಕೆ ಕಟ್ಟುವ ಯಂತ್ರ.

ಓಂ	ಓಂ	(
ಓಂ	ಓಂ	
ಓಂ	ಓಂ	
ಓಂ	ಓಂ	)

ಬ್ರಾಕೆಟ್ಟಿನಲ್ಲಿ ಹೆಸರನ್ನು ಬರೆಯುವದು. ಈ ಯಂತ್ರವನ್ನು ಭುಜಪತ್ರೆಯಲ್ಲಿ ಕುಂಕುಮ ದಿಂದ ಬರೆದು ಕಟ್ಟಿಕೊಳ್ಳುವದು.

೨ ನೆಯ ವಿಧ ಹೊಲದ ಯಂತ್ರ.

ಕ್ಷ	ಹ್ರೀಂ
ಕ್ಷ	ಹ್ರೀಂ
ಕ್ಷ	ಹ್ರೀಂ
ಕ್ಷ	ಹ್ರೀಂ


ಈ ಯಂತ್ರವನ್ನು ತಾಮ್ರದ ತಗಡಿನ ಮೇಲೆ ಬರೆದು ಪೂಜಿಸಿ ಹೊಲದ ನಾಲ್ಕು ಮೂಲೆಗೂ ಕಟ್ಟಿದರೆ ಮಿಡಿಚೆ ಮೊದಲಾದ ಸಮಸ್ತ ವಿಧ ಕ್ರಿಮಿಗಳೂ ನಾಶವಾಗುತ್ತವೆ.

೩ ನೆಯ ವಿಧ ಹೊಲದ ಯಂತ್ರ.

೪೬	೬	೨	೭
೬೩	೩	೮	೬
೧೦	೫	೮	೧
೪	೫	೬	೯

ಈ ಯಂತ್ರವನ್ನು ಕೇತಕಿಗರಿಯಲ್ಲಿ ಬರೆದು ಅರಿಸಿನದ ದಾರದಿಂದ ಕಟ್ಟಿ ಅಷ್ಟವಿಧಾರ್ಚನೆಯಿಂದ ಪೂಜಿಸಿ ಆದಿತ್ಯವಾರದ ದಿನ ಹೊಲದ ೪ ಮೂಲೆಗೂ ಕಟ್ಟಿ ಕುಂಬಾರನ ಮನೆಯ ಆವಿಗೆಯ ಬೂದಿಯನ್ನು ತಂದು ಪೂಜಿಸಿ ಹೊಲದ ಸುತ್ತಲೂ ಚಲ್ಲಿದರೆ ಮೃಗ, ಪಕ್ಷಿ, ಕ್ರಿಮಿಕೀಟ ಮೊದಲಾದವುಗಳು ಪೈರನ್ನು ಮುಟ್ಟುವದಿಲ್ಲ.

ಸ್ತ್ರೀ ಸನ್ಮಾನ ಯಂತ್ರ.



ಈ ಯಂತ್ರವನ್ನು ವೀಳೆಯದೆಲೆಯೊಳಗೆ ತನ್ನ ಉಗುರುಗಳಿಂದ ಬರೆದು ಸ್ತ್ರೀಯಳಿಗೆ ಕೊಡಲು ಸನ್ಮಾನ ಮಾಡುವಳು.

ಮತ್ತೊಂದು ವಿಧ ಸ್ತ್ರೀ ಸನ್ಮಾನ ಯಂತ್ರ

ಕ್ರೀ	ಹ್ರೀ	ಹ್ರೀ
ಹ್ರೀ	ಹ್ರೀ	ಕ್ರೀ
ಹ್ರೀ	ಕ್ರೀ	ಹ್ರೀ

ಈ ಯಂತ್ರವನ್ನು ಮುಳ್ಳಿನಿಂದ ವೀಳೆಯದೆಲೆಯ ಮೇಲೆ ಬರೆದು ಅದರಲ್ಲಿಯೇ ಆಕೆಯ ಹೆಸರನ್ನು ಬರೆದು ಪೂಜಿಸಿ ಸ್ತ್ರೀಯಳಿಗೆ ಕಟ್ಟಲು ಸನ್ಮಾನ ಮಾಡುವಳು. ಇದಕ್ಕೆ ಮಂತ್ರ ॥ ಓಂ ನಮೋ ಭಗವತಿ ಪದ್ಮಾವತಿ ಸ್ವಾಹಾ ॥

ಪುರುಷಸನ್ಮಾನ ಯಂತ್ರ

ಮ	ಕ್ಲಿ	ಕ್ಷ್ಣೆಂ	ದಾ
ದಿಂ		ತ್ರ	

ಈ ಯಂತ್ರವನ್ನು ಸ್ತ್ರೀಯಳು ವೀಳೆಯ ದೆಲೆಯೊಳಗೆ ಬರೆದು ಪುರುಷನಿಗೆ ಕಟ್ಟಲು ಪುರುಷನು ಸನ್ಮಾನ ಮಾಡುವನು. ಪುರುಷನ ಹೆಸರನ್ನು ಆ ಎಲೆಯ ಹಿಂಭಾಗದಲ್ಲಿ ಬರೆಯಬೇಕು.

ಗಂಡನೊಲ್ಲದ ಹೆಂಡತಿಗೆ, ಹೆಂಡತಿಯನ್ನೊಲ್ಲದ ಗಂಡನಿಗೆ, ಕಟ್ಟುವ ಯಂತ್ರ

ಹ್ರೆಂ	ಹ್ರಿಂ	ಹ್ರೆಂ	ಹ್ರಂ
ಹ್ರಂ	ಹ್ರಂ	ಹ್ರಿಂ	ಹ್ರಂ
ಹ್ರೆಂ	ಹ್ರಂ	ಹ್ರಂ	ಹ್ರಂ
ಹ್ರಂ	ಹ್ರುಂ	ಹ್ರಂ	ಹ್ರಂ

ರಥಬಂಧ.

ಈ ಬಂಧದಲ್ಲಿ ಬರೆದಿರುವ ಶ್ಲೋಕವನ್ನು ಓದುವ ಕ್ರಮ—ರಥಕ್ಕೆ ಕಲಶಭೂತವಾದ ಮೇಲಿನ ಮನೆಮೊದಲು ಅಡ್ಡವಾಗಿರುವ ಮನೆಗಳನ್ನೇ ಎಡಭಾಗದಿಂದ ಬಲಭಾಗಕ್ಕೆ ಓದುತ್ತ ಹೋಗಿ ಕೊನೆಗೆ ಒಂದು ಮನೆಯನ್ನು ಬಿಟ್ಟು ಎಡಭಾಗದ ಚಕ್ರಗಳೊಳಗಿ ಅಕ್ಷರಗಳನ್ನೂ ಅನಂತರ ನಡುವಿನ ಅಕ್ಷರಗಳನ್ನೂ ಅನಂತರ ಬಲಭಾಗದ ಚಕ್ರಗಳ ಅಕ್ಷರಗಳನ್ನೂ ಓದಬೇಕೆಂದು ತಾತ್ಪರ್ಯವು

ಎಲ್ಲಾ ಮನೆಗಳಿಗೂ ನಡುವೆ ಇರುವ ಮನೆಗಳಲ್ಲಿ ಉದ್ದವಾಗಿ ಓದಲು ಗ್ರಂಥದ ಹೆಸರು ಬರುತ್ತದೆ. ಕೆಳಭಾಗದಲ್ಲಿ ಈ ಶ್ಲೋಕ ಬರೆದಿರುತ್ತದೆ. ಪಾಠ್ಯವಾಗಿ ಓದಿಕೊಳ್ಳಲು ತಿಳಿಯುವದು.

ಶ್ಲೋಕ ॥ ಆದಾರೂಪಿತಗೂಢಭಾವಫಲದಿಂ ಪ್ರಸ್ಪಷ್ಟಯೇದಾತ್ಮಂಕಿತಂ। ಪ್ರಶ್ನ ಸ್ತೋಮಧನಂ ತತೋಥಸುರುಚಂತಂತ್ರಾದಿಸದ್ಗುಂಭಿತಂ ॥ ತನ್ನಿಸ್ಸಿದ್ರಿತ ಮದ್ಯಪೂರ್ತಿಮಗಮಚ್ಛಿ ್ರೀಶಾಮ್ಯಸತ್ಕಾಕುಕಂ । ನಾನಾಯಂತ್ರಸುಸಾಧ್ಯ ಮಂತ್ರಲಿಖಿತೋ ಭಾಗಸ್ಯಯೋಗಂಕ್ಷಣಾತ್ ॥

ಇತಿ ಸದಾಶಿವಾರ್ಪಣಮಸ್ತು

ಶ್ರೀ ಶಿವಾಯನಮಃ.

ಆರೂಢ ಪ್ರಶ್ನಚಂದ್ರಿಕೆಯಲ್ಲಿ ಮೂರನೆಯ ವೈದ್ಯಭಾಗವು.

ಮೂರನೆಯ ಉಪೋದ್ಘಾತವು.

ಶ್ಲೋ ॥ ಸುಖಸ್ಯದುಃಖಸ್ಯನಕೋಽಪಿದಾತಾ ।
ಪರೋದದಾತೀತಿಕುಬುದ್ಧಿರೇಷಾ ॥
ಅಹಂಕಾರೋಮಿಽತಿವೃಥಾಭಿಮಾನ ॥
ಸ್ವಕರ್ಮಸೂತ್ರಗ್ರಥಿತೋಽಹಿಲೋಕಃ ॥

ಲೋಕದಲ್ಲಿ ಜನಗಳಿಗೆ ಸುಖದುಃಖಗಳು ಪೂರ್ವಜನ್ಮಕೃತ ಪುಣ್ಯಪಾಪಗಳಿಂದ ಬರುವದೇ ಹೊರತು ನಮ್ಮ ಪ್ರಯತ್ನಗಳಿಂದಾಗಲಿ ಮತ್ತೊಬ್ಬರ ಸಹಾಯದಿಂದಾಗಲಿ ಬರುವದಿಲ್ಲ. ಇದರಲ್ಲಿ ಪಾಪಫಲವಾದ ದುಃಖನೆಂಬುದು "ಪೂರ್ವಜನ್ಮ ಕೃತಂಪಾಪಂ ವ್ಯಾಧಿರೂಪೇಣಬಾಧಿತಂ । ತಚ್ಛಾಂತಿ ರೌಷಧೈರ್ದಾನೈರ್ಜಪಹೋಮ ಸುರಾರ್ಚನೈಃ ॥ " ಎಂಬ ವಚನಾನುಸಾರವಾಗಿ ವ್ಯಾಧಿರೂಪವಾಗಿ ಪರಿಣಮಿಸಿ ತೊಂದರೆಯನ್ನು ಕೊಡುತ್ತಿರುವವು. ವ್ಯಾಧಿ ಎಂಬದು

ಭಿಂದಿ ಭಿಂದಿ ಹ್ರಾಂ ಹ್ರೂಂ ಹ್ರಾಂ ಹ್ರೂಂ ಫಟ್
ಮೊದಲಾದ ಗ್ರಹಂಗಳಿಗೆ ವಿಭೂತಿಯನ್ನು ಮಂತ್ರಿಸಿ ತಲೆಯಿಂದ
ಸ್ವಾಹಾ ॥ ಈ ಮಂತ್ರದಿಂದ ೧ ಸಾರಿ ದೋಷ ನಿವಾರಣೆಯಾಗುವದು.
ಪಾದದವರೆಗೆ ಹಚ್ಚಲು ಛಳಿಜ್ವರ ಬಾಲಗ್ರಹ

ಜ್ವರದ ಮಂತ್ರ.

ಅಮೃತ ಅಮೃತ ಅಮೃತ ಕಂಚ ಓಂನಮಶ್ಶಿವಾಯ ಓಂನಮಶ್ಶಿವಾಯ ಓಂನಮಶ್ಶಿವಾಯ ಓಂ ಫಟ್ ಫಟ್ ಸ್ವಾಹಾ ಓಂ ಫಟ್ ಸ್ವಾಹಾ ॥ ಈ ಎರಡು ಮಂತ್ರಗಳನ್ನು ಹಿಂದೆ ಹೇಳಿದ ಪ್ರಕಾರ ಸಿದ್ಧಿಯನ್ನು ಮಾಡಿಕೊಂಡು ಜ್ವರ ಬಂದಿದ್ದರೂ ಹೊಟ್ಟೆ ಉಬ್ಬಿದ್ದರೂ ದೃಷ್ಟಿ ಆಗಿದ್ದರೂ ೫ ಸಾರಿ ಮಂತ್ರಿಸಿದರೆ ನಿವಾರಣೆಯಾಗುವದು.

ಅಘೋರ ಮಂತ್ರ.

ಓಂ ಅಘೋರೇಭ್ಯೋ ತ್ಥಘೋರೇಭ್ಯೋ ಘೋರಘೋರತರೇಭ್ಯಃ । ಸರ್ವೇಭ್ಯಸ್ಸರ್ವಸರ್ವೇ ಭ್ಯೋನಮಸ್ತೇ ಅಸ್ತುರುದ್ರರೂಪೇಭ್ಯಃ॥ ಈ ಮಂತ್ರವನ್ನು ಹಿಂದೆ ಹೇಳಿದ ಪ್ರಕಾರ ಸಿದ್ಧಿ ಮಾಡಿಕೊಂಡು ವಶ್ಯಕ್ಕೆ ೧೧ ಸಾರಿ ಸ್ತಂಭನಕ್ಕೆ ೧೮ ಸಾರಿ ಆಕರ್ಷಣಕ್ಕೆ ೧೬ ಸಾರಿ ಅರ್ಥಲಾಭಕ್ಕೆ ೧೨೫ ಸಾರಿ ಮೋಹನಕ್ಕೆ ೧೦೩ ಸಾರಿ ಉಚ್ಚಾಟನಕ್ಕೆ ೮೯ ಸಾರಿ ಸರ್ಪ ಕಚ್ಚಿದ್ದಕ್ಕೂ ಪಶುಗಳ ವ್ಯಾಧಿಗೂ ೪೬ ಸಾರಿ ದೆವ್ವ ಪೀಡೆ ಪಿಶಾಚಿಗೆ ೧೦೧ ಸಾರಿ ಶಸ್ತ್ರಸ್ತಂಭನಕ್ಕೆ ೨೪ ಸಾರಿ ಬಂಧನಮೋಕ್ಷ ೧೧೫ ಸಾರಿ ಸರ್ವಜನ ವಶ್ಯಕ್ಕೆ ೧೧೦ ಸಾರಿ ಸಂತಾನ ಲಾಭಕ್ಕೆ ೧೦೮ ಸಾರಿ ಚೋರಭಯಕ್ಕೆ ೨೯ ಸಾರಿ ದಾರಿದ್ರ್ಯಕ್ಕೆ ೨೨೧ ಸಾರಿ ತಲೆಸೂಲೆಗೆ ೩೪ ಸಾರಿ ಸ್ತ್ರೀಯಳು ಮೈನೆರೆಯದಿದ್ದರೆ ೧೬ ಸಾರಿ ರಾಜವಶ್ಯಕ್ಕೆ ೩೩ ಸಾರಿ ಹೆಂಡತಿಯನ್ನು ಗಂಡನು ಒಲ್ಲದಿದ್ದರೆ ೫೨ ಸಾರಿ ಹೆಂಡತಿಯು ಗಂಡನನ್ನು ಒಲ್ಲದಿದ್ದರೆ ೨೬ ಸಾರಿ ಇಲಿ ಹೆಗ್ಗಣ ಚೇಳು ಮುಂತಾದ ವಿಷಜಂತುಗಳು ಕಚ್ಚಿದುದಕ್ಕೆ ೧೮ ಸಾರಿ ಮಲೆ ಹಾಲು ಇಲ್ಲದಿದ್ದರೆ ೮೫ ಸಾರಿ ಸ್ತ್ರೀವಶ್ಯಕ್ಕೆ ೬೬ ಸಾರಿ ತೊಡೆವಾಳಕ್ಕೆ ೫೧ ಸಾರಿ ಛಳಿಜ್ವರಕ್ಕೆ ೫೦ ಸಾರಿ ಪಶುಗಳು ಕರೆಯದಿದ್ದರೆ ೬ ಸಾರಿ ಹೊಟ್ಟೆಶೂಲೆಗೆ ೪೬ ಸಾರಿ ಗರ್ಭಿಣಿ ಸ್ತ್ರೀ ಜನನವು ಆಗದಿದ್ದರೆ ೪ ಸಾರಿ ಮಂತ್ರಿಸಿದರೆ ಮೇಲ್ಕಂಡ ದೋಷಗಳು ಖಂಡಿತವಾಗಿ ನಿವಾರಣೆ ಆಗುತ್ತದೆ. ಈ ಸಿದ್ಧಾಂತವು ಸುಳ್ಳಲ್ಲ.

ಅಥ ತಲೆಶೂಲಿ ನಿವಾರಣ ಮಂತ್ರ.

ಮಂತ್ರ ॥ ಓಂ ಹ್ರೂಂ ಹ್ರೂಂ ಶ್ರೀಂ ಕ್ಲೀಂ ಕ್ಷಂ ಓಂ-ಹ್ರೂಂ-ಹ್ರೀಂ-ಹ್ರೂಂ ಫಟುಸ್ವಾಹಾ ॥ ಎಂದು ೬ ಸಾರಿ ಮಂತ್ರಿಸಿದರೆ ತಲೆಶೂಲೆ, ಅರೆತಲೆಶೂಲೆ, ಹೊಟ್ಟೆಸೂಲೆ, ದೃಷ್ಟಿ ಆದವರಿಗೂ, ಒಳದಂತ ಕೈಕಾಲು ಕುತ್ತಿಗೆ ಉಸುರು ಸಿಕ್ಕಿದವರಿಗೂ, ಹೆದರಿದ ಮಕ್ಕಳಿಗೂ ಹಿಂದೆ ಹೇಳಿದಂತೆ ಮಂತ್ರಿಸಿದರೆ ನಿವಾರಣೆಯಾಗುತ್ತವೆ. ಈ ಮಂತ್ರವನ್ನು ಹಿಂದೆ ಹೇಳಿದ ಪ್ರಕಾರ ಸಿದ್ಧಿ ಮಾಡಿಕೊಳ್ಳಬೇಕು